# ವನ್ಯ

ಹಸಿರು ಲೋಕದ ಕೌತುಕ

## ಮಾರ್ಚ್ 2026



ಅಘನಾಶಿನಿ ನೇಚರ್ ಫೌಂಡೇಶನ್

ಜ್ಞಾನದ ಹರಿವು

# ವನ್ಯ
ಹಸಿರು ಲೋಕದ ಕೌತುಕ

# ಪರಿವಿಡಿ


| ಕ್ರಮ ಸಂ | ಲೇಖನಗಳು | ಪುಟ ಸಂ |
|---|---|---|
| | **ಕಾಡಿನ ಕತೆಗಳು** | |
| 1 | ಕರಾವಳಿಯ ಹಸಿರು ಕವಚ: ಮಂಗಳೂರು ಬಟಪಾಡಿ ಕಾಂಡ್ಲವನ ಅರಣ್ಯದ ವೈವಿಧ್ಯತೆ - ಅಜಿತ್. ಕೆ ಮತ್ತು ಡಾ. ಟಿ. ಎಸ್. ಅನ್ನಪ್ಪಸ್ವಾಮಿ | 1 |
| 2 | ವನ್ಯಜೀವಿಗಳ ಸಂರಕ್ಷಣೆಗೆ ಜಾಗತಿಕ ಕರೆ - ವಿಶ್ವ ವನ್ಯಜೀವಿ ದಿನ - ಗಿರಿ ವಾಲ್ಮೀಕಿ | 4 |
| 3 | ಕರ್ನಾಟಕದಲ್ಲಿ ಹಾರುವ ಅಳಿಲು - ಡಾ. ಶ್ರೀನಿವಾಸ್ ಬಿ. ನೆಗಳೂರ | 8 |
| | **ಸಸ್ಯ ಲೋಕ** | |
| 4 | ಸರೋವರದ ಮಡಿಲಲಿ ಅರಳಿದ ಜಲಸಿರಿ ಸತ್ಯನಾರಾಯಣ ಪೂಜಾಪುಷ್ಪ ಕಲ್ಹಾರ -ಉಮಾಪತಿ ಭಟ್ಟ ಕೆ ವಿ | 12 |
| | **ಪ್ರಾಣಿ ಪ್ರಪಂಚದ ವಿಚಿತ್ರ ಪ್ರಭೇದಗಳು** | |
| 5 | ಅರಣ್ಯದ ಮಹಾಕಾಯ ಕಾಡುಕೋಣ - ನವೀನ ಪ್ಯಾಟಿಮನಿ | 15 |
| | **ವನ್ಯ ಕ್ಯಾಲೆಂಡರ್** | 18 |









**ಮುಖ್ಯ ಸಂಪಾದಕರು**
ಕೆ ಪಿ ಧನಂಜಯ್ ಕುಮಾರ್

**ಸಂಪಾದಕೀಯ ತಂಡ**
ವಿಘ್ನೇಶ್ ಆಗುಂಬೆ
ಶ್ರೀನಿಧಿ ರಾಮಚಂದ್ರ ನಾಯ್ಕ
ನಮಿತಾ ಸಿ ಕಾನಳ್ಳಿಮಠ
ನಯನ ಆರ್

ಮುಖಪುಟ: ವಿಶಾಲ್ ಕುಂಬಾರ್

ಲೇಖನ 01

# ಕರಾವಳಿಯ ಹಸಿರು ಕವಚ:
# ಮಂಗಳೂರು ಬಟಪಾಡಿ ಕಾಂಡ್ಲವನ ಅರಣ್ಯದ ವೈವಿಧ್ಯತೆ

ಸಮುದ್ರದ ಅಲೆಗಳು ಅಬ್ಬರಿಸುವ ಕರಾವಳಿಯ ಅಂಚಿನಲ್ಲಿ, ಮಣ್ಣನ್ನು ಗಟ್ಟಿಯಾಗಿ ಹಿಡಿದುಕೊಂಡು ನಿಂತಿರುವ ಹಸಿರು ಅರಣ್ಯಗಳು ನಮ್ಮ ಕಣ್ಣಿಗೆ ಅಷ್ಟಾಗಿ ಕಾಣದಿದ್ದರೂ, ಅವುಗಳ ಸೇವೆ ಅಪಾರ. ಇವುಗಳೇ ಕಾಂಡ್ಲವನ ಅರಣ್ಯಗಳು. ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಸಮೀಪದ ಬಟಪಾಡಿ ಪ್ರದೇಶದಲ್ಲಿರುವ ಕಾಂಡ್ಲವನ ಅರಣ್ಯವು ಪ್ರಕೃತಿಯ ಅಮೂಲ್ಯ ಕೊಡುಗೆಗಳಲ್ಲಿ ಒಂದಾಗಿದೆ. ಇತ್ತೀಚೆಗೆ ನಡೆದ ವೈಜ್ಞಾನಿಕ ಅಧ್ಯಯನವು ಬಟಪಾಡಿ ಕಾಂಡ್ಲವನ ಅರಣ್ಯದ ಜೀವವೈವಿಧ್ಯತೆ ಮತ್ತು ಪರಿಸರ ಮಹತ್ವವನ್ನು ಸ್ಪಷ್ಟವಾಗಿ ಬೆಳಕಿಗೆ ತಂದಿದೆ.

### ಕಾಂಡ್ಲವನ ಎಂದರೆ ಏನು?

ಕಾಂಡ್ಲವನಗಳು ಉಪ್ಪು ನೀರಿಗೆ ಹೊಂದಿಕೊಂಡು ಬೆಳೆಯುವ ವಿಶಿಷ್ಟ ಮರಗಳು ಮತ್ತು ಪೊದೆಗಳ ಸಮುದಾಯವಾಗಿವೆ. ನದಿ ಮತ್ತು ಸಮುದ್ರ ಸೇರುವ ಜ್ಞಾರು-ಭಾಟೆ ಪ್ರದೇಶಗಳಲ್ಲಿ ಇವು ಬೆಳೆಯುತ್ತವೆ. ಉಪ್ಪುನೀರು, ಮಣ್ಣಿನ ಅಸ್ಥಿರತೆ ಮತ್ತು ಕಡಿಮೆ ಆಮ್ಲಜನಕದಂತಹ ಕಠಿಣ ಪರಿಸ್ಥಿತಿಗಳಲ್ಲೂ ಜೀವಿಸುವ ಅಪರೂಪದ ಸಾಮರ್ಥ್ಯ ಕಾಂಡ್ಲವನ ಸಸ್ಯಗಳಿಗೆ ಇದೆ. ಗಾಳಿಯಿಂದ ಉಸಿರಾಡುವ ಬೇರುಗಳು, ನೀರಿನ ಹರಿವನ್ನು ತಡೆಯುವ ದಟ್ಟ ಬೇರು ಜಾಲ ಮತ್ತು ಮಣ್ಣನ್ನು ಬಿಗಿಯಾಗಿ ಹಿಡಿದಿಡುವ ಶಕ್ತಿ ಇವುಗಳ ಪ್ರಮುಖ ಲಕ್ಷಣಗಳಾಗಿವೆ. ಈ ಕಾರಣದಿಂದಲೇ ಕಾಂಡ್ಲ ವನಗಳನ್ನು ಕರಾವಳಿಯ “ಹಸಿರು ಕವಚ” ಎಂದು ಕರೆಯಲಾಗುತ್ತದೆ.



ಚಿತ್ರ ಕೃಪೆ: :- ಶ್ರೀವತ್ಸ ಹೆಮ್ಮಾಡಿ

### ಬಟಪಾಡಿ ಕಾಂಡ್ಲವನ ಪ್ರದೇಶದ ವಿಶೇಷತೆ:

ಬಟಪಾಡಿ ಕಾಂಡ್ಲ ವನ ಪ್ರದೇಶವು ಮಂಗಳೂರು ನಗರದಿಂದ ಸುಮಾರು 15 ಕಿಲೋಮೀಟರ್ ದೂರದಲ್ಲಿದ್ದು, ಕರ್ನಾಟಕ-ಕೇರಳ ಗಡಿಗೆ ಸಮೀಪದಲ್ಲಿದೆ. ತಲಪಾಡಿ ಮತ್ತು ಉಚ್ಚಿಲ ನದಿಗಳಿಂದ ಪೋಷಿತವಾಗಿರುವ ಈ ಪ್ರದೇಶದಲ್ಲಿ ಉಪ್ಪುನೀರು ಮತ್ತು ಸಿಹಿನೀರಿನ ಮಿಶ್ರಣ ಕಂಡುಬರುತ್ತದೆ. ಇದು ಕಾಂಡ್ಲವನಗಳ ಬೆಳವಣಿಗೆಗೆ ಅತ್ಯಂತ ಸೂಕ್ತವಾದ ಪರಿಸರವನ್ನು ನಿರ್ಮಿಸಿದೆ. ಈ ಅಧ್ಯಯನದಲ್ಲಿ ಬಟಪಾಡಿ ಕಾಂಡ್ಲವನ ಅರಣ್ಯದ ಐದು ವಿಭಿನ್ನ ಸ್ಥಳಗಳಲ್ಲಿ ಸಸ್ಯ ವೈವಿಧ್ಯತೆಯನ್ನು ಪರಿಶೀಲಿಸಲಾಗಿದೆ.

### ಹಸಿರಿನೊಳಗಿನ ವೈವಿಧ್ಯತೆ

ಬಟಪಾಡಿ ಕಾಂಡ್ಲವನ ಪ್ರದೇಶದಲ್ಲಿ ಒಟ್ಟು ಏಳು ಕಾಂಡ್ಲವನ ಸಸ್ಯ ಪ್ರಭೇದಗಳು ಕಂಡುಬಂದಿವೆ.

ಅವುಗಳಲ್ಲಿ Rhizophora mucronata ಅತ್ಯಂತ ವ್ಯಾಪಕವಾಗಿ ಎಲ್ಲ ಪ್ರದೇಶಗಳಲ್ಲಿಯೂ ಕಂಡುಬಂದ ಪ್ರಮುಖ ಸಸ್ಯವಾಗಿದೆ. ಇದರ ಜೊತೆಗೆ Avicennia marina, Rhizophora apiculata, Kandelia candel, Ceriops decandra, Volkameria inermis & Acanthus ilicifolius ಮುಂತಾದ ಕಾಂಡ್ಲವನ ಸಸ್ಯಗಳು ಗುರುತಿಸಲ್ಪಟ್ಟಿವೆ. ಕೆಲವು ಸಸ್ಯಗಳು ಎತ್ತರದ ಮರಗಳಾಗಿದ್ದರೆ, ಕೆಲವು ಪೊದೆಗಳಾಗಿದ್ದು, ಕೆಲವು ಔಷಧೀಯ ಮಹತ್ವವನ್ನೂ ಹೊಂದಿವೆ. ಇದು ಬಟಪಾಡಿ ಕಾಂಡ್ಲವನ ಅರಣ್ಯದ ಪರಿಸರ ಸಮೃದ್ಧತೆಯನ್ನು ತೋರಿಸುತ್ತದೆ.



ಚಿತ್ರ ಕೃಪೆ: :- ಶ್ರೀವತ್ಸ ಹೆಮ್ಮಾಡಿ

**ಅಂಕಿ-ಅಂಶಗಳು ಹೇಳುವ ಕಥೆ**

ಕಾಂಡ್ಲವನ ಅರಣ್ಯದ ಆರೋಗ್ಯವನ್ನು ಅಳೆಯಲು ವಿಜ್ಞಾನಿಗಳು ಜೀವವೈವಿಧ್ಯ ಸೂಚ್ಯಂಕಗಳನ್ನು ಬಳಸುತ್ತಾರೆ. ಬಟಪಾಡಿ ಅಧ್ಯಯನದಲ್ಲಿ ಕಂಡುಬಂದ ಪ್ರಮುಖ ಅಂಶವೆಂದರೆ, ಸ್ಟೇಷನ್-4 ಅತ್ಯಧಿಕ ಜೀವವೈವಿಧ್ಯತೆಯನ್ನು ಹೊಂದಿರುವ ಪ್ರದೇಶವಾಗಿದೆ. ಇಲ್ಲಿ ಸಸ್ಯಗಳ ಸಂಖ್ಯೆ ಮಾತ್ರವಲ್ಲ, ಅವುಗಳ ಸಮತೋಲನಯುತ ವಿತರಣೆ ಕೂಡ ಉತ್ತಮವಾಗಿದೆ. ಇದಕ್ಕೆ ವಿರುದ್ಧವಾಗಿ ಸ್ಟೇಷನ್-3ರಲ್ಲಿ ಜೀವವೈವಿಧ್ಯತೆ ಕಡಿಮೆಯಾಗಿದ್ದು, ಪರಿಸರ ಒತ್ತಡಗಳಿರುವ ಸಾಧ್ಯತೆಯನ್ನು ಸೂಚಿಸುತ್ತದೆ.

ಜೀವವೈವಿಧ್ಯತೆ ಹೆಚ್ಚು ಇರುವ ಪ್ರದೇಶಗಳು ಪ್ರಕೃತಿಕ ವಿಪತ್ತುಗಳನ್ನು ಉತ್ತಮವಾಗಿ ಎದುರಿಸುವ ಶಕ್ತಿ ಹೊಂದಿರುತ್ತವೆ ಎಂಬುದು ವಿಜ್ಞಾನಾತ್ಮಕವಾಗಿ ಸಾಬೀತಾಗಿದೆ.

**ಜೀವಜಾಲದ ಜೀವಾಳ**

ಕಾಂಡ್ಲವನ ಅರಣ್ಯಗಳು ಕೇವಲ ಸಸ್ಯಗಳ ಸಂಗ್ರಹವಲ್ಲ. ಇವು ಮೀನು, ಸೀಗಡಿ, ಏಡಿ, ಮೃದ್ವಂಗಿಗಳು ಮತ್ತು ಅನೇಕ ಪಕ್ಷಿಗಳಿಗೆ ಆಶ್ರಯ ಹಾಗೂ ಸಂತಾನೋತ್ಪತ್ತಿ ಸ್ಥಳಗಳಾಗಿವೆ. ಕಾಂಡ್ಲವನ ಬೇರುಗಳ ನಡುವೆ ಬೆಳೆಯುವ ಸಣ್ಣ ಜೀವಿಗಳು ದೊಡ್ಡ ಸಮುದ್ರ ಜೀವಿಗಳ ಆಹಾರವಾಗುತ್ತವೆ. ಈ ಮೂಲಕ ಕಾಂಡ್ಲವನಗಳು ಸಂಪೂರ್ಣ ಸಮುದ್ರ ಆಹಾರ ಸರಪಳಿಗೆ ಆಧಾರವಾಗಿವೆ. ಸ್ಥಳೀಯ ಮೀನುಗಾರರ ಜೀವನೋಪಾಯವೂ ಕಾಂಡ್ಲವನಗಳ ಆರೋಗ್ಯದ ಮೇಲೆ ನೇರವಾಗಿ ಅವಲಂಬಿತವಾಗಿದೆ.

**ಹವಾಮಾನ ನಿಯಂತ್ರಣದಲ್ಲಿ ಕಾಂಡ್ಲವನಗಳ ಮಹತ್ವ**

ಇಂದಿನ ಯುಗದಲ್ಲಿ ಹವಾಮಾನ ಬದಲಾವಣೆ ಜಗತ್ತಿನ ದೊಡ್ಡ ಸವಾಲಾಗಿದೆ.



ಚಿತ್ರ ಕೃಪೆ: :- ಶ್ರೀವತ್ಸ ಹೆಮ್ಮಾಡಿ

ಕಾಂಡ್ಲವನ ಅರಣ್ಯಗಳು ವಾತಾವರಣದಲ್ಲಿರುವ ಕಾರ್ಬನ್ ಡೈಆಕ್ಸೈಡ್ ಅನ್ನು ಹೀರಿಕೊಂಡು ದೀರ್ಘಕಾಲ ಮಣ್ಣಿನಲ್ಲಿ ಸಂಗ್ರಹಿಸುವ ಅಪರೂಪದ ಸಾಮರ್ಥ್ಯ ಹೊಂದಿವೆ. ಈ ಕಾರಣದಿಂದ ಕಾಂಡ್ಲವನಗಳನ್ನು "ಬ್ಲೂ ಕಾರ್ಬನ್ ಪರಿಸರ ವ್ಯವಸ್ಥೆ" ಎಂದು ಕರೆಯಲಾಗುತ್ತದೆ. ಹವಾಮಾನ ಬದಲಾವಣೆಯ ವಿರುದ್ಧ ಹೋರಾಟದಲ್ಲಿ ಕಾಂಡ್ಲವನಗಳು ಮೌನವಾಗಿ ಆದರೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತವೆ.

**ಅಪಾಯದ ನೆರಳು**

ಇಂತಹ ಮಹತ್ವಾದ ಪರಿಸರ ವ್ಯವಸ್ಥೆಗಳು ಇಂದು ಹಲವು ಅಪಾಯಗಳನ್ನು ಎದುರಿಸುತ್ತಿವೆ. ನಗರೀಕರಣ, ಅಕ್ರಮ ಕಟ್ಟಡ ನಿರ್ಮಾಣ, ಕೈಗಾರಿಕಾ ಮತ್ತು ಗೃಹ ಮಲಿನ್ಯ, ರಸ್ತೆ ಹಾಗೂ ಬಂದರು ಅಭಿವೃದ್ಧಿ ಕಾಂಡ್ಲ ವನ ಅರಣ್ಯಗಳ ಕ್ಷಯಕ್ಕೆ ಪ್ರಮುಖ ಕಾರಣಗಳಾಗಿವೆ. ಜನರಲ್ಲಿ ಇರುವ ಅರಿವು ಕೊರತೆಯೂ ಈ ಸಮಸ್ಯೆಯನ್ನು ಮತ್ತಷ್ಟು ಗಂಭೀರಗೊಳಿಸುತ್ತಿದೆ.



ಚಿತ್ರ ಕೃಪೆ: :- ಶ್ರೀವತ್ಸ ಹೆಮ್ಮಾಡಿ

**ಉಳಿಸೋಣ ಹಸಿರು ಕವಚವನ್ನು**

ಬಟಪಾಡಿ ಕಾಂಡ್ಲವನ ಅಧ್ಯಯನವು ಒಂದು ಸ್ಪಷ್ಟ ಸಂದೇಶ ನೀಡುತ್ತದೆ ಜೀವವೈವಿಧ್ಯತೆ ಉಳಿದರೆ ಮಾತ್ರ ಕಾಂಡ್ಲವನ ಅರಣ್ಯಗಳು ಕರಾವಳಿಯನ್ನು ರಕ್ಷಿಸಬಲ್ಲವು. ವೈಜ್ಞಾನಿಕ ಸಂರಕ್ಷಣಾ ಯೋಜನೆಗಳು, ಸ್ಥಳೀಯ ಸಮುದಾಯದ ಸಹಭಾಗಿತ್ವ, ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ ಮತ್ತು ಸರ್ಕಾರದ ಬಲವಾದ ನೀತಿಗಳು ಇಂದು ಅತ್ಯಗತ್ಯವಾಗಿವೆ. ಕಾಂಡ್ಲವನ ಸಂರಕ್ಷಣೆ ಎಂದರೆ ಪ್ರಕೃತಿಯ ರಕ್ಷಣೆ ಮಾತ್ರವಲ್ಲ, ಮಾನವ ಜೀವನದ ಭದ್ರತೆಯೂ ಹೌದು.

**ಉಪಸಂಹಾರ**

ಬಟಪಾಡಿ ಕಾಂಡ್ಲವನ ಅರಣ್ಯವು ದಕ್ಷಿಣ ಕನ್ನಡ ಕರಾವಳಿಯ ಪರಿಸರ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದು, ಅದರ ಜೀವವೈವಿಧ್ಯತೆ ಪರಿಸರ ಸ್ಥಿರತೆಯ ಸೂಚಕವಾಗಿದೆ.

ಇಂತಹ ಅಧ್ಯಯನಗಳು ಕಾಂಡ್ಲವನಗಳ ಮಹತ್ವದ ಬಗ್ಗೆ ಸಾರ್ವಜನಿಕ ಜಾಗೃತಿಯನ್ನು ಹೆಚ್ಚಿಸುತ್ತವೆ.

**ಕಾಂಡ್ಲವನ ಉಳಿದರೆ ಕರಾವಳಿ ಉಳಿಯುತ್ತದೆ; ಕರಾವಳಿ ಉಳಿದರೆ ನಮ್ಮ ಭವಿಷ್ಯವೂ ಸುರಕ್ಷಿತವಾಗಿರುತ್ತದೆ.**


**ಅಜಿತ್. ಕೆ ಮತ್ತು ಡಾ. ಟಿ. ಎಸ್. ಅಣ್ಣಪ್ಪಸ್ವಾಮಿ**
ಜಲಪರಿಸರ ನಿರ್ವಹಣಾ ವಿಭಾಗ,
ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು.
ಇಮೇಲ್:ajithajju630@gmail.com

ಲೇಖನ 02

# ವನ್ಯಜೀವಿಗಳ ಸಂರಕ್ಷಣೆಗೆ ಜಾಗತಿಕ ಕರೆ
# ವಿಶ್ವ ವನ್ಯಜೀವಿ ದಿನ

ಆವಾಸಸ್ಥಾನ ನಾಶ, ಹವಾಮಾನ ಬದಲಾವಣೆ, ಬೇಟೆ ಮತ್ತು ಮಾನವ ಹಸ್ತಕ್ಷೇಪದಿಂದಾಗಿ ಲೆಕ್ಕವಿಲ್ಲದಷ್ಟು ಪ್ರಭೇದಗಳು ಅಳಿವಿನಂಚಿನಲ್ಲಿವೆ. ತೀವ್ರ ಅಳಿವಿನಂಚಿನಲ್ಲಿರುವ ಪ್ರಭೇದಗಳನ್ನು ರಕ್ಷಿಸುವುದು ಮತ್ತು ಜಾಗೃತಿ ಮೂಡಿಸುವ ಸಲುವಾಗಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆ (UNGA) 2013ರಲ್ಲಿ ಮಾರ್ಚ್ 3 ಅನ್ನು 'ವಿಶ್ವ ವನ್ಯಜೀವಿ ದಿನ' ಎಂದು ಘೋಷಿಸಿತು. ಹವಾಮಾನ ಬದಲಾವಣೆ, ಅರಣ್ಯ ನಾಶ ಮತ್ತು ಅಕ್ರಮ ಬೇಟೆಯಿಂದಾಗಿ ಲಕ್ಷಾಂತರ ಜೀವ ಪ್ರಭೇದಗಳು ಅಳಿವಿನ ಭೀತಿಯಲ್ಲಿವೆ. ಏರುತ್ತಿರುವ ತಾಪಮಾನದಿಂದಾಗಿ ಆರ್ಕ್ಟಿಕ್‌ನ ಹಿಮಕರಡಿಗಳಿಂದ ಹಿಡಿದು ಕರ್ನಾಟಕದ ದೊರವಾಯನ ಹಕ್ಕಿಗಳು, ಭಾರತೀಯ ಬೂದು ತೋಳಗಳು, ಸರೀಸೃಪಗಳು, ವಲಸೆ ಹಕ್ಕಿಗಳೆಲ್ಲವು ಹಾಗೂ ಸಮುದ್ರದ ಹವಳದ ದಿಬ್ಬಗಳವರೆಗೆ ಎಲ್ಲವೂ ಇಂದು ಸಂಕಷ್ಟದಲ್ಲಿವೆ.

‘IUCN’ ಪ್ರಕಟಿಸಿರುವ ಕೆಂಪು ಪಟ್ಟಿ(Red list) ಪ್ರಕಾರ ಜಗತ್ತಿನ 44,000ಕ್ಕೂ ಹೆಚ್ಚು ಪ್ರಭೇದಗಳು ಜಾಗತಿಕವಾಗಿ ಅಳಿವಿನ ಭೀತಿ ಎದುರಿಸುತ್ತಿವೆ. ಅದರಲ್ಲಿ ಶೇ 41ರಷ್ಟು ಉಭಯಚರಗಳು ಮತ್ತು ಶೇ 25ರಷ್ಟು ಸಸ್ತನಿಗಳು ಸೇರಿವೆ. ಪ್ರತಿ ವರ್ಷ ಜಗತ್ತು ಸುಮಾರು 10 ದಶಲಕ್ಷ ಹೆಕ್ಟೇರ್ ಅರಣ್ಯವನ್ನು ಕಳೆದುಕೊಳ್ಳುತ್ತಿದೆ. ಇದು ಜೀವ ವೈವಿಧ್ಯದ ಆವಾಸ ಸ್ಥಾನದ ಮೇಲೆ ನೇರ ಪರಿಣಾಮ ಬೀರುತ್ತಿದೆ. ಸಮುದ್ರದ ತಾಪಮಾನ ಏರಿಕೆಯಿಂದಾಗಿ ಹಿಮಾಲಯ ಸ್ವಲ್ಪ ಸ್ವಲ್ಪವಾಗಿ ಕರಗುತ್ತಿರುವುದರಿಂದ, ಜಗತ್ತಿನ ಶೇ 50ರಷ್ಟು ಹವಳದ ದಿಬ್ಬಗಳು ಈಗಾಗಲೇ ನಾಶವಾಗಿವೆ.



ಚಿತ್ರ ಕೃಪೆ: :- ಪ್ರದೀಪ್ ಶೆಟ್ಟಿ


ಭಾರತವು ವಿಶ್ವದ ಒಟ್ಟು ಭೂಭಾಗದಲ್ಲಿ ಶೇ 2.4ರಷ್ಟಿದ್ದರೂ, ಜಗತ್ತಿನ ಶೇ 7–8ರಷ್ಟು ಜೀವವೈವಿಧ್ಯದ ಆವಾಸ ಸ್ಥಾನವಾಗಿದೆ. ನಮ್ಮ ವನ್ಯಜೀವಿ ಸಂರಕ್ಷಣಾ ಪ್ರಯತ್ನ ಮತ್ತು ಅದರ ಫಲಗಳು ಆಶಾದಾಯಕವಾಗಿವೆ. ಆದರೆ, ಮನುಷ್ಯ ಸೃಷ್ಟಿಸುತ್ತಿರುವ ವಿಕಾರಗಳಿಂದ ಅಭಿವೃದ್ಧಿಯ ಸವಾಲುಗಳಿಂದ ಮುಕ್ತವಾಗಿಲ್ಲ. ಭಾರತದಂತಹ ಅಸಂಖ್ಯ ಜನ ಬಾಹುಳ್ಯವಿರುವ ದೇಶದಲ್ಲಿ ಕಾಡುಗಳ ಒತ್ತುವರಿಯಿಂದಾಗಿ ವನ್ಯಮೃಗ–ಮಾನವ ಸಂಘರ್ಷ ದಿನೇ ದಿನೇ ಹೆಚ್ಚುತ್ತಲೇ ಇದೆ. ಇದು ರೈತರ ಬೆಳೆ ಹಾನಿ ಮತ್ತು ಪ್ರಾಣಿಗಳ ಜೀವಹಾನಿಯಾಗಿ ಮಾನವ-ವನ್ಯಜೀವ ಸಂಘರ್ಷಕ್ಕೆ ನಾಂದಿ ಹಾಡಿದೆ.

ಪ್ರತಿ ವರ್ಷ ಮಾರ್ಚ್ 3ರಂದು ವಿಶ್ವದಾದ್ಯಂತ ‘ವಿಶ್ವ ವನ್ಯಜೀವಿ ದಿನ’ವನ್ನು ಆಚರಿಸಲಾಗುತ್ತದೆ.

1973ರ ಮಾರ್ಚ್ 3 ರಂದು 'ಅಳಿವಿನಂಚಿನಲ್ಲಿರುವ ವನ್ಯಜೀವಿ ಮತ್ತು ಸಸ್ಯವರ್ಗದ ಅಂತರರಾಷ್ಟ್ರೀಯ ವ್ಯಾಪಾರ ಸಮಾವೇಶ' ಅಂಗೀಕಾರಗೊಂಡ ನೆನಪಿಗಾಗಿ ವಿಶ್ವಸಂಸ್ಥೆಯು ಈ ದಿನವನ್ನು ಮೀಸಲಿಟ್ಟಿದೆ. ಭೂಮಿಯ ಮೇಲಿನ ವೈವಿಧ್ಯಮಯ ಪ್ರಾಣಿ ಮತ್ತು ಸಸ್ಯ ಸಂಕುಲಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಅವುಗಳ ರಕ್ಷಣೆಗೆ ಒತ್ತು ನೀಡುವುದು ಈ ದಿನದ ಮುಖ್ಯ ಉದ್ದೇಶವಾಗಿದೆ.

ಕರ್ನಾಟಕ ರಾಜ್ಯ ಬಜೆಟ್ ನಲ್ಲಿ ಕರ್ನಾಟಕ ಮಾನವ- ವನ್ಯಪ್ರಾಣಿ ಸಂಘರ್ಷ ನಿವಾರಣಾ ಕಾರ್ಯತಂತ್ರ ಯೋಜನೆಗೆ ಹಾಗೂ ವನ್ಯಜೀವಿಗಳ ಸಂರಕ್ಷಣೆಗೆ 269 ಕೋಟಿ ರೂಪಾಯಿ ಮೀಸಲಿಡಸಲಾಗಿದೆ. ಕಳೆದ 3 ವರ್ಷಗಳಲ್ಲಿ 1,044 ಕೋಟಿ ರೂಪಾಯಿ ಹಣವನ್ನು ಇದಕ್ಕಾಗಿ ವೆಚ್ಚ ಮಾಡಲಾಗಿದೆ.

ಭಾರತದಲ್ಲಿ ನಶಿಸಿಹೋಗಿದ್ದ ಚೀತಾ ಸಂತತಿಯನ್ನು ಮತ್ತೆ ಅಭಿವೃದ್ಧಿಪಡಿಸಲು, 'ಪ್ರಾಜೆಕ್ಟ್ ಚೀತಾ' ಹಮ್ಮಿಕೊಳ್ಳಲಾಗಿದೆ. ಇದರ ಭಾಗವಾಗಿ ನಮಿಬೀಯಾದಿಂದ 5 ಹೆಣ್ಣು ಮತ್ತು 3 ಗಂಡು ಚೀತಾಗಳನ್ನು ತಂದು, ಕುನೊ ರಾಷ್ಟ್ರೀಯ ಉದ್ಯಾನಕ್ಕೆ 2022ರ ಸೆ.17ರಂದು ಬಿಡಲಾಗಿತ್ತು. ಇದರೊಂದಿಗೆ ಚೀತಾ ಸಂರಕ್ಷಣೆ ಮತ್ತು ತಳಿಸಂವರ್ಧನೆಯ ಬಯಕೆ ಮತ್ತಷ್ಟು ಗರಿಗೆದರಿತು. ಇವುಗಳ ಪೈಕಿ ಕೆಲ ಚೀತಾಗಳು ಮರಿಗಳಿಗೆ ಜನ್ಮ ನೀಡಿವೆ. ಸದ್ಯ ಭಾರತದಲ್ಲಿ 35 ಚೀತಾಗಳಿವೆ.



ಚಿತ್ರ ಕೃಪೆ: :- ಪ್ರದೀಪ್ ಜೆಟ್ಟಿ

ಪ್ರಾಜೆಕ್ಟ್ ಟೈಗರ್' ಮತ್ತು 'ಪ್ರಾಜೆಕ್ಟ್ ಎಲಿಫೆಂಟ್' ಮೂಲಕ ಹುಲಿ ಮತ್ತು ಆನೆಗಳ ಸಂಖ್ಯೆಯು ಗಣನೀಯವಾಗಿ ಹೆಚ್ಚಿದೆ. 2022ರ ಗಣತಿಯ ಪ್ರಕಾರ, ಭಾರತದಲ್ಲಿ ಹುಲಿಗಳ ಸಂಖ್ಯೆಯು 3,682ಕ್ಕೆ ಏರಿಕೆಯಾಗಿದೆ. ಇದು ವಿಶ್ವದ ಒಟ್ಟು ಹುಲಿ ಸಂಖ್ಯೆಯ ಶೇ 75ರಷ್ಟಿದೆ. ಭಾರತದಲ್ಲಿ ಸುಮಾರು 22–27 ಸಾವಿರ ಏಷ್ಯನ್ ಆನೆಗಳಿವೆ. ಕರ್ನಾಟಕವು ದೇಶದಲ್ಲೇ ಅತಿಹೆಚ್ಚು ಆನೆಗಳನ್ನು ಹೊಂದಿರುವ ರಾಜ್ಯವಾಗಿದೆ. ಅಂತರರಾಷ್ಟ್ರೀಯ ಸಹಭಾಗಿತ್ವದ ಅಡಿಯಲ್ಲಿ 'ಪ್ರಾಜೆಕ್ಟ್ ಚೀತಾ' ಪ್ರಾರಂಭಿಸಿ 70 ವರ್ಷಗಳ ಹಿಂದೆ ಭಾರತದಲ್ಲಿ ಅಳಿದು ಹೋಗಿದ್ದ ಚೀತಾಗಳನ್ನು ನಮೀಬಿಯಾ ಮತ್ತು ದಕ್ಷಿಣ ಆಫ್ರಿಕಾದಿಂದ ತಂದು ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಮರುಪರಿಚಯಿಸಲಾಗಿದೆ. ಇದು ಜಗತ್ತಿನ ಮೊದಲ ಖಂಡಾಂತರ ಮಾಂಸಾಹಾರಿ ಪ್ರಾಣಿ ವರ್ಗಾವಣೆ ಯೋಜನೆಯಾಗಿದೆ. ವಿಶ್ವದ ಏಳು ಪ್ರಮುಖ ಬೆಕ್ಕಿನ ತಳಿಗಳಾದ ಹುಲಿ, ಸಿಂಹ, ಚಿರತೆ, ಹಿಮಚಿರತೆ, ಚೀತಾ, ಜಾಗ್ವಾರ್ ಮತ್ತು ಪೂಮಾ ಗಳನ್ನು ರಕ್ಷಿಸಲು ಇರುವ ಇಂಟರ್ ನ್ಯಾಷನಲ್ ಬಿಗ್ ಕ್ಯಾಟ್ ಅಲಯನ್ಸ್ ಎಂಬ ಜಾಗತಿಕ ಒಕ್ಕೂಟ ವನ್ನು ಭಾರತವೇ ಮುನ್ನಡೆಸುತ್ತಿದೆ.

ಭಾರತದಲ್ಲಿ 22,446 ಕಾಡಾನೆಗಳಿವೆ ಎಂದು ಸಿಂಕ್ರೋನಸ್ ಆಲ್ ಇಂಡಿಯಾ ಎಲಿಫೆಂಟ್ ಎಸ್ಟಿಮೇಷನ್ ಪ್ರೋಗ್ರಾಂ (ಎಸ್ಎಐಇಇ 2021–25) ಹೆಸರಿನಲ್ಲಿ ನಡೆದ ಗಣತಿಯ ಆಧಾರದಲ್ಲಿ ಸಿದ್ಧಪಡಿಸಲಾಗಿರುವ 'ಭಾರತದಲ್ಲಿ ಆನೆಗಳ ಸ್ಥಿತಿಗತಿ ವರದಿ' ಹೇಳಿದೆ. ಪರಿಸರ ಸಚಿವಾಲಯ, ಪ್ರಾಜೆಕ್ಟ್ ಎಲಿಫೆಂಟ್ ಮತ್ತು ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಜಂಟಿಯಾಗಿ ಈ ಗಣತಿ ನಡೆಸಿವೆ.

ರಾಜ್ಯಗಳ ಪೈಕಿ ಆನೆಗಳ ಸಂಖ್ಯೆಯಲ್ಲಿ ಕರ್ನಾಟಕವು (6,013) ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಅಸ್ಸಾಂ (4,159), ತಮಿಳುನಾಡು (3,136), ಕೇರಳ (2,785) ಮತ್ತು ಉತ್ತರಾಖಂಡ (1,792) ಇವೆ. ದೇಶದ ಆನೆಗಳ ಪೈಕಿ ಶೇ 59.29ರಷ್ಟು ಕರ್ನಾಟಕ, ಅಸ್ಸಾಂ, ತಮಿಳುನಾಡಿನಲ್ಲಿಯೇ ಇವೆ ಎಂದು ವರದಿ ಹೇಳಿದೆ. ಪ್ರದೇಶವಾರು ಆನೆಗಳ ಸಂಖ್ಯೆಯಲ್ಲಿ, ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯದಲ್ಲಿ ಹರಡಿರುವ ಪಶ್ಚಿಮ ಘಟ್ಟಗಳು ಮುಂಚೂಣಿ ಸ್ಥಾನ ಪಡೆದಿವೆ. ಜತೆಗೆ, ಈಶಾನ್ಯ ರಾಜ್ಯಗಳ ವ್ಯಾಪ್ತಿಯ ಅಸ್ಸಾಂ ಮತ್ತು ಬ್ರಹ್ಮಪುತ್ರ ಜಲಾನಯನ ಪ್ರದೇಶ ಎರಡನೇ ಸ್ಥಾನದಲ್ಲಿದೆ.

ಒಂದೆಡೆ ಆಧುನೀಕರಣ, ನಗರೀಕರಣದಿಂದಾಗಿ ಮನುಷ್ಯ ಅಭಿವೃದ್ಧಿ ಹೊಂದುತ್ತಾ ಹೋಗುತ್ತಿದ್ದರೆ, ಇನ್ನೊಂದೆಡೆ ಮನುಷ್ಯನ ಸ್ವಾರ್ಥದಿಂದ ಸಸ್ಯ ಸಂಪತ್ತು, ವನ್ಯ ಜೀವಿಗಳು ಅಳಿವಿನಂಚಿನತ್ತ ಸಾಗಿವೆ. ಈ ನಿಟ್ಟಿನಲ್ಲಿ ವಿಶ್ವ ವನ್ಯಜೀವಿ ದಿನದ ಉದ್ದೇಶವು ವನ್ಯಜೀವಿಗಳು ಮತ್ತು ಅಳಿವಿನಂಚಿನಲ್ಲಿರುವ ಸಸ್ಯ ಮತ್ತು ಪ್ರಾಣಿಗಳ ರಕ್ಷಣೆಯ ಬಗ್ಗೆ ಪ್ರಪಂಚದಾದ್ಯಂತದ ಜನರಲ್ಲಿ ಜಾಗೃತಿ ಮೂಡಿಸಲು, ಪ್ರಾಣಿಗಳ ಆವಾಸಸ್ಥಾನ ನಾಶ ಮತ್ತು ಅಕ್ರಮ ವನ್ಯಜೀವಿ ವ್ಯಾಪಾರವನ್ನು ತಡೆಯಲು ಈ ದಿನವನ್ನು ಆಚರಣೆ ಮಾಡಲಾಗುತ್ತದೆ. ಒಂದೆಡೆ ಜಗತ್ತು ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಾ ಹೋಗುತ್ತಿದ್ದರೆ, ಇನ್ನೊಂದೆಡೆ ಮನುಷ್ಯನ ಸ್ವಾರ್ಥಕ್ಕೆ ಕಾಡುಗಳು ನಾಶವಾಗುತ್ತಿದ್ವೆ, ಪ್ರಾಣಿ-ಪಕ್ಷಿ ಸಂಕುಲಗಳು ವಿನಾಶದತ್ತ ತಲುಪುತ್ತಿದೆ. ಹೌದು ಮನುಷ್ಯನ ಸ್ವಾರ್ಥದ ಕಾರಣದಿಂದಾಗಿ ಗುಬ್ಬಚ್ಚಿಯಂತಹ ಅದೆಷ್ಟೋ ಪುಟ್ಟ ಪಕ್ಷಿಗಳಾಗಿರಬಹುದು, ಪ್ರಾಣಿಗಳು ಅಳಿವಿನಂಚಿನತ್ತ ಸಾಗಿವೆ. ಮೊದಲೆಲ್ಲಾ ಕಣ್ಣಿಗೆ ಕಾಣಿಸುತ್ತಿದ್ದ ಜೀವಿಗಳು ಇಂದು ಕಣ್ಮರೆಯಾಗುತ್ತಿರುವುದು ದುರಂತ.

ಇದು ಹೀಗೆ ಮುಂದುವರೆಯುತ್ತಾ ಹೋದರೆ ಮುಂದೊಂದು ದಿನ ವನ್ಯ ಜೀವಿಗಳನ್ನು ಬರೀ ಫೋಟೋಗಳಲ್ಲಿ ನೋಡುವ ಕಾಲ ಬಂದರೂ ಅಚ್ಚರಿಯಿಲ್ಲ.



ಚಿತ್ರ ಕೃಪೆ: :- ಪ್ರದೀಪ್ ಜೆಟ್ಟಿ

**2026 ರ ಥೀಮ್: "Medicinal and Aromatic Plants: Conserving Health, Heritage and Livelihoods"** (ಔಷಧೀಯ ಮತ್ತು ಸುಗಂಧಿತ ಸಸ್ಯಗಳು: ಆರೋಗ್ಯ, ಪರಂಪರೆ ಮತ್ತು ಜೀವನೋಪಾಯದ ಸಂರಕ್ಷಣೆ).

ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ, ಜನಸಂಖ್ಯೆಯ 70-95 ಪ್ರತಿಶತದಷ್ಟು ಜನರು ಪ್ರಾಥಮಿಕ ಆರೋಗ್ಯ ರಕ್ಷಣೆಗಾಗಿ ಸಾಂಪ್ರದಾಯಿಕ ಔಷಧವನ್ನು ಅವಲಂಬಿಸಿದ್ದಾರೆ. ಈ ಸಸ್ಯಗಳು ಅನೇಕ ಆರೋಗ್ಯ ವ್ಯವಸ್ಥೆಗಳ ಅಡಿಪಾಯವನ್ನು ರೂಪಿಸುತ್ತವೆ ಮತ್ತು ಆಧುನಿಕ ಔಷಧಗಳಿಗೆ ಪ್ರಮುಖವಾಗಿವೆ, ಏಕೆಂದರೆ ಸಂಶ್ಲೇಷಿತ ರಸಾಯನಶಾಸ್ತ್ರದಲ್ಲಿನ ಪ್ರಗತಿಗಳ ಹೊರತಾಗಿಯೂ ಹಲವಾರು ಸಕ್ರಿಯ ಔಷಧ ಸಂಯುಕ್ತಗಳು ನೈಸರ್ಗಿಕ ಮೂಲಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಮನುಷ್ಯನಿಗೆ ದೊರೆಕಿದೆ.. ಜಾಗತಿಕವಾಗಿ ಪ್ರಪಂಚದಾದ್ಯಂತ ಸರಿ ಸುಮಾರು 50,000-70,000 ಔಷಧೀಯ &ಸುಗಂಧಭರಿತ ಸಸ್ಯ(MAP) ಪ್ರಭೇಧಗಳನ್ನು ಕೊಯ್ಲು ಮಾಡಲಾಗುತ್ತದೆ.

**ತೀವ್ರ ಅಳಿವಿನಂಚಿನಲ್ಲಿರುವ ಪ್ರಮುಖ 5 ಪ್ರಭೇದಗಳಿವು:**

1) ದೈತ್ಯ ಪಾಂಡಾ(Giant panda)
2) ಸೈಬೀರಿಯನ್ ಹುಲಿ(Siberian tiger)
3) ಸುಮಾತ್ರನ್ ಒರಾಂಗುಟನ್ (Sumatran orangutan)
4) ಹವಾಯಿಯನ್ ಮಾಂಕ್ ಸೀಲ್ (Hawaiian monk seal)
5) ಅಮುರ್ ಚಿರತೆ (Amur leopard)

**ಶೃಂಗಿಗೆ(ಕೊಂಬು) ಬಂದ ಕುತ್ತು:**

ಚೀನಾ ಹಾಗೂ ವಿಯೆಟ್ನಾಂಗಳಲ್ಲಿ ಘೇಂಡಾಮೃಗಗಳ ಕೊಂಬಿಗೆ ಔಷಧೀಯ ಗುಣಗಳಿವೆ ಎಂಬ ನಂಬಿಕೆ ಜನರಲ್ಲಿದೆ. ಇದೇ ಕಾರಣಕ್ಕೆ ವಿಶ್ವದಾದ್ಯಂತ ಘೇಂಡಾಮೃಗಗಳನ್ನು ಹತ್ಯೆ ಮಾಡಲಾಗುತ್ತಿದೆ. ಜಗತ್ತಿನಾದ್ಯಂತ ನಡೆಯುವ ವನ್ಯಜೀವಿಗಳ ಕಳ್ಳಸಾಗಣೆಯಲ್ಲಿ ಘೇಂಡಾಮೃಗಗಳ ಕೊಂಬು, ಅಂಗಗಳಿಂದ ತಯಾರಾದ ಉತ್ಪನ್ನಗಳ ಕಳ್ಳಸಾಗಣೆಯು ಶೇ 29ರಷ್ಟಿದೆ ಎಂದು ವಿಶ್ವಸಂಸ್ಥೆ ಹೇಳುತ್ತದೆ. ಜಗತ್ತಿನಾದ್ಯಂತ ಘೇಂಡಾಮೃಗಗಳ ಸಂಖ್ಯೆಯು ತುಸು ಏರಿಕೆ ಕಾಣುತ್ತಿದ್ದರೂ ಅದರ ಕೊಂಬಿಗಾಗಿ ಹೆಚ್ಚಿನ ಪ್ರಮಾಣದಲ್ಲಿ ಬೇಟೆಯಾಡಲಾಗುತ್ತಿದೆ.

ಹವಾಮಾನ ಬದಲಾವಣೆ, ಆವಾಸಸ್ಥಾನಗಳು ಕಾಣೆಯಾಗುತ್ತಿರುವುದು ಘೇಂಡಾಮೃಗಗಳ ಸಂಖ್ಯೆ ಇಳಿಕೆಯಾಗಲು ಇರುವ ಇತರ ಪ್ರಮುಖ ಕಾರಣಗಳು.

ಜಾಗತಿಕ ತಾಪಮಾನ ಹೆಚ್ಚಳದಿಂದ ಪ್ರಕೃತಿಯಲ್ಲಿ ಏರುಪೇರಾಗುತ್ತಿದೆ. ಅಂತರ್ಜಲ ಮಟ್ಟ ಕಡಿಮೆಯಾಗಿದೆ. ನದಿಗಳು ಜೀವವನ್ನು ಕಳೆದುಕೊಳ್ಳುತ್ತಿವೆ. 50 ವರ್ಷಗಳ ಹಿಂದಿನ ನಿಸರ್ಗ ಸಮತೋಲನದಿಂದಿತ್ತು. ಕೈಗಾರೀಕರಣ, ನಗರೀಕರಣ, ಕೃಷಿ ಯಾಂತ್ರೀಕರಣ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ವೇಗದ ಅಭಿವೃದ್ಧಿ ಹಾಗೂ ಬದಲಾವಣೆಗಳಿಂದ ಭೂಮಿಯ ಜೀವವೈವಿಧ್ಯ ನಾಶವಾಗುತ್ತಿದೆ. ಇರುವುದೊಂದೇ ಭೂಮಿ. ಈ ಭೂಮಿಯಲ್ಲಿ ಮಾನವನ ಜೊತೆ ಜೀವಿಗಳಿಗೂ ಬದುಕುವ ಹಕ್ಕಿದೆ. ಈ ನಿಟ್ಟಿನಲ್ಲಿ ನಾವು ಜೀವವೈವಿಧ್ಯತೆಯನ್ನು ಉಳಿಸುವ ಮತ್ತು ಸಂರಕ್ಷಿಸುವ ಕಾರ್ಯ ಮಾಡಬೇಕಾಗಿರುವುದು ಇಂದಿನ ತುರ್ತು. ಬರೀ ಕಾನೂನುಗಳಿಂದ ಜೀವವೈವಿಧ್ಯ ಉಳಿಸಲು ಸಾಧ್ಯವಿಲ್ಲ. ವಿಜ್ಞಾನ, ತಂತ್ರಜ್ಞಾನ ಮತ್ತು ಸಾಮಾನ್ಯ ಜನರ ಸಹಭಾಗಿತ್ವ ಸೇರಿದಾಗ ಮಾತ್ರ ನಾವು ಭೂಮಿಯನ್ನು ಮುಂದಿನ ಪೀಳಿಗೆಗೆ ಉಳಿಸಿ ಕೊಡಬಹುದು.

::::::::::::::::::::::::::::::::::::::::::::

**ಗಿರಿ ವಾಲ್ಮೀಕಿ**
**ಅರಣ್ಯ ಮೌಲ್ಯಮಾಪನ ವರದಿಗಾರ**
**ಪ್ರಮಾಣೀಕೃತ ಪರಿಸರ ಸ್ವಯಂ ಸೇವಕ**
**ಹೂವಿನ ಹಡಗಲಿ**
**ಇಮೇಲ್:girivalmiki604@gmail.com**

ಲೇಖನ 03

# ಕರ್ನಾಟಕದಲ್ಲಿ ಹಾರುವ ಅಳಿಲು

ಉಷ್ಣವಲಯದ ಅರಣ್ಯಗಳು ಎರಡು ವಿಶಿಷ್ಟ ಗುಣಲಕ್ಷಣಗಳನ್ನು ಹೊಂದಿವೆಃ ಹೆಚ್ಚಿನ ಪ್ರಭೇದಗಳ ಸಮೃದ್ಧತೆ ಮತ್ತು ಭೂಮಿಯ ಮೇಲಿನ ಯಾವುದೇ ಅರಣ್ಯಕ್ಕಿಂತ ಹೆಚ್ಚು ವಿರೂಪಗೊಂಡ ಬಯೋಮ್. ಅರಣ್ಯಗಳ ನಾಶ ಮತ್ತು ಉಷ್ಣವಲಯದ ಅರಣ್ಯದ ವಿಶೇಷ ಪ್ರಾಣಿ ಮತ್ತು ಸಸ್ಯವರ್ಗದ ಮೇಲೆ ಅದರ ಪರಿಣಾಮವನ್ನು ಭಾರತೀಯ ಪ್ರದೇಶದಲ್ಲಿ ಸ್ವಲ್ಪ ಮಟ್ಟಿಗೆ ಮೌಲ್ಯಮಾಪನ ಮಾಡಲಾಗಿದೆ. ಮರದ ವಾಸಿಸುವ ಸಸ್ತನಿಗಳನ್ನು ಸಾಮಾನ್ಯವಾಗಿ ಅಂತಹ ಮೌಲ್ಯಮಾಪನಕ್ಕಾಗಿ ಪರಿಗಣಿಸಲಾಗುತ್ತದೆ ಏಕೆಂದರೆ ಅವುಗಳ ಮೇಲಾವರಣದ ನಿಕಟತೆ ಮತ್ತು ಸಾಂದ್ರತೆಯೊಂದಿಗೆ ಬಲವಾದ ಸಂಬಂಧವಿದೆ. ಅರ್ಬೋರಿಯಲ್ ಸಸ್ತನಿಗಳಲ್ಲಿ, ಅಳಿಲುಗಳನ್ನು ಪರಿಸರ ಆರೋಗ್ಯದ ಸೂಚಕ ಪ್ರಭೇದಗಳೆಂದು ಗುರುತಿಸಲಾಗಿದೆ.

ಹಾರುವ ಅಳಿಲುಗಳು ಹೆಚ್ಚಾಗಿ ರಾತ್ರಿಯಲ್ಲಿರುತ್ತವೆ ಮತ್ತು ಹಗಲಿನಲ್ಲಿ ಮರಗಳ ರಂಧ್ರಗಳಲ್ಲಿ ಆಶ್ರಯ ಪಡೆಯುತ್ತವೆ. ಅವು ಪರಿಸರ ವ್ಯವಸ್ಥೆಯ ಪ್ರಮುಖ ಅಂಶಗಳಾಗಿವೆ, ಏಕೆಂದರೆ ಅವು ಹಲವಾರು ಪಕ್ಷಿಗಳ ಅಗ್ರ ಪರಭಕ್ಷಕಗಳಿಗೆ ಪ್ರಮುಖ ಬೇಟೆಯ ನೆಲೆಯಾಗಿದೆ. ಒಟ್ಟು 44 ಜಾತಿಯ ಅಳಿಲುಗಳು ಜಗತ್ತಿನಲ್ಲಿ ಕಂಡುಬರುತ್ತವೆ, ಅವುಗಳಲ್ಲಿ 12 ಪ್ರಭೇದಗಳು ಭಾರತದಲ್ಲಿ ಕಂಡುಬರುತ್ತವೆ. ಕೇವಲ ಎರಡು ಪ್ರಭೇದಗಳು, ಇಂಡಿಯನ್ ಜೈಂಟ್ ಫ್ಲೈಯಿಂಗ್ ಸ್ಕ್ವಿರೆಲ್ ಪೆಟೌರಿಸ್ಟಾ ಫಿಲಿಪ್ಪೆನ್ಸಿಸ್ ಮತ್ತು ಸ್ಮಾಲ್ ಟ್ರಾವೆನ್ಕೋರ್ ಫ್ಲೈಯಿಂಗ್ ಸ್ಕ್ವಿರೆಲ್ ಪೆಟಿನೋಮಿಸ್ ಫುಸ್ಕೊಕಾಪಿಲ್ಲಸ್ ಫುಸ್ಕೊಕಾಪಿಲ್ಲಸ್ ಪಶ್ಚಿಮ ಘಟ್ಟಗಳಲ್ಲಿ ಹರಡಿಕೊಂಡಿವೆ ಮತ್ತು ಉಳಿದವು ಭಾರತದ ಉತ್ತರ ಮತ್ತು ಈಶಾನ್ಯ ಭಾಗಗಳಲ್ಲಿ ಕಂಡುಬರುತ್ತವೆ.



ಚಿತ್ರ ಕೃಪೆ: :- ಡಾ. ಶ್ರೀಕಾಂತ್ ಗುಣಗಾ

ರಾತ್ರಿಯ ಸಸ್ತನಿಗಳು, ತಮ್ಮ ನಿಗೂಢ ಮತ್ತು ನಿಗೂಢ ಅಭ್ಯಾಸಗಳ ಕಾರಣದಿಂದಾಗಿ, ಪ್ರಪಂಚದ ಅನೇಕ ಭಾಗಗಳಲ್ಲಿ, ವಿಶೇಷವಾಗಿ ಉಷ್ಣವಲಯದಲ್ಲಿ ಕಡಿಮೆ ಪರಿಚಿತವಾಗಿವೆ. ಗ್ಲೈಡಿಂಗ್ ಸಸ್ತನಿಗಳ ಐದು ಕುಟುಂಬಗಳಲ್ಲಿ ಒಂದಾದ ಪೆಟೌರಿಸ್ಟಿನೇ (ಹಾರುವ ಅಳಿಲುಗಳನ್ನು ಒಳಗೊಂಡಿರುವ), ದಕ್ಷಿಣ ಏಷ್ಯಾದಲ್ಲಿ ಕಡಿಮೆ ವೈಜ್ಞಾನಿಕ ಗಮನವನ್ನು ಪಡೆದಿರುವ ಒಂದು ಉದಾಹರಣೆಯಾಗಿದೆ. ಈಶಾನ್ಯ ಭಾರತ ಮತ್ತು ಉತ್ತರ ಭಾರತದಲ್ಲಿ ಒಟ್ಟಾಗಿ ಸುಮಾರು 10 ಜಾತಿಯ ಹಾರುವ ಅಳಿಲುಗಳು ವಾಸವಾಗಿದ್ದರೆ, ಪಶ್ಚಿಮ ಘಟ್ಟಗಳಲ್ಲಿ ಕೇವಲ ಎರಡು ಜಾತಿಯ ಹಾರುವ ಅಳಿಲುಗಳು ಕಂಡುಬರುತ್ತವೆಃ ಸಣ್ಣ ಟ್ರಾವಂಕೂರ್ ಹಾರುವ ಅಳಿಲು (ಪೆಟಿನೋಮಿಸ್ ಫುಸ್ಕೊಕಾಪಿಲಸ್ ಫುಸ್ಕೊಕಾಪಿಲಸ್) ಮತ್ತು ದೊಡ್ಡ ಕಂದು ಬಣ್ಣದ ಹಾರುವ ಅಳಿಲು (ಪೆಟೌರಿಸ್ಟಾ ಫಿಲಿಪ್ಪೆನ್ಸಿಸ್).

ಸಣ್ಣ ತಿರುವಾಂಕೂರು ಹಾರುವ ಅಳಿಲು ಪೆಟಿನೋಮಿಸ್ ಫುಸ್ಕೊಕ್ಯಾಪಿಲಸ್ ಫುಸ್ಕೊಕ್ಯಾಪಿಲಸ್ ಪಶ್ಚಿಮ ಘಟ್ಟದ ಕಾಡುಗಳಿಗೆ ಸ್ಥಳೀಯವಾಗಿದೆ. ಈ ಪ್ರಭೇದವು ಅಪರೂಪವಾಗಿದ್ದು, ಭಾರತದಲ್ಲಿ ಅಷ್ಟಾಗಿ ತಿಳಿದಿರದ ಹಾರುವ ಅಳಿಲುಗಳಲ್ಲಿ ಒಂದಾಗಿದೆ. ಪೆಟೌರಿಸ್ಟಾ ಫಿಲಿಪ್ಪೆನ್ಸಿಸ್ ವ್ಯಾಪಕವಾದ ಹರಡುವಿಕೆಯನ್ನು ಹೊಂದಿದೆ ಮತ್ತು ಭಾರತ ಪರ್ಯಾಯ ದ್ವೀಪದ ಹೆಚ್ಚಿನ ಕಾಡುಗಳಲ್ಲಿ ಕಂಡುಬರುತ್ತದೆ. ಪಿ. ಎಫ್. ಫುಸ್ಕೊಕಾಪಿಲ್ಲಸ್ನ ಸಂರಕ್ಷಣಾ ಸ್ಥಿತಿಯನ್ನು ಇತ್ತೀಚೆಗೆ 2000 ಐಯುಸಿಎನ್ ರೆಡ್ ಲಿಸ್ಟ್ ಆಫ್ ಥ್ರೆಟೆನ್ಡ್ ಸ್ಪೀಸೀಸ್ (ಹಿಲ್ಟನ್-ಟೇಲರ್ 2000) ನಿಂದ ಅದರ ನಿರ್ಬಂಧಿತ ವಿತರಣೆ ಮತ್ತು ಅದರ ಆವಾಸಸ್ಥಾನಕ್ಕೆ ಬೆದರಿಕೆಗಳ ಕಾರಣದಿಂದಾಗಿ ದುರ್ಬಲ ಎಂದು ನಿರ್ಣಯಿಸಲಾಗಿದೆ.

ಪಶ್ಚಿಮ ಘಟ್ಟಗಳು ಹೆಚ್ಚುತ್ತಿರುವ ಮಾನವ ಒತ್ತಡದಲ್ಲಿದ್ದು, ಕಳೆದ 22 ವರ್ಷಗಳಲ್ಲಿ ಒಟ್ಟು ಅರಣ್ಯ ಪ್ರದೇಶದ ಶೇಕಡಾ 25.6 ಕ್ಕಿಂತ ಹೆಚ್ಚು ನಷ್ಟವಾಗಿದೆ. ಮಾನವನ ಅಡಚಣೆಗಳು ಕ್ರಮೇಣ ಅರಣ್ಯ ರಚನೆ ಮತ್ತು ಸಂಯೋಜನೆಯನ್ನು ಬದಲಾಯಿಸುತ್ತವೆ ಮತ್ತು ಸಸ್ಯ ಸಸ್ತನಿಗಳ ಮೇಲೆ ಹಾನಿಕಾರಕ ಪರಿಣಾಮವನ್ನು ಬೀರಬಹುದು. ಅರಣ್ಯ ಪ್ರದೇಶಗಳನ್ನು ತೋಟಗಳಾಗಿ ಪರಿವರ್ತಿಸುವುದು ಮತ್ತು ಆವಾಸಸ್ಥಾನವನ್ನು ನಾಶಪಡಿಸುವ ಅಥವಾ ಬದಲಾಯಿಸುವ ಇತರ ಅಭಿವೃದ್ಧಿ ಚಟುವಟಿಕೆಗಳು ಜನಸಂಖ್ಯೆಯ ಗಾತ್ರ ಮತ್ತು ಹಾರುವ ಅಳಿಲುಗಳ ಪ್ರಸರಣ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತವೆ ಮತ್ತು ಸ್ಪರ್ಧಿಗಳು, ಪರಭಕ್ಷಕಗಳು ಮತ್ತು ರೋಗಕಾರಕಗಳ ಆಕ್ರಮಣಕ್ಕೆ ಕಾರಣವಾಗುತ್ತವೆ ಎಂದು ನಂಬಲಾಗಿದೆ.

ದಕ್ಷಿಣ ಭಾರತದಲ್ಲಿ ಹಾರುವ ಅಳಿಲುಗಳ ಎರಡು ಪ್ರಭೇದಗಳ ಬಗ್ಗೆ ಬಹಳ ಕಡಿಮೆ ಮಾಹಿತಿ ಇದೆ, ಮತ್ತು ಅವುಗಳ ಜೀವಶಾಸ್ತ್ರದ ಬಗ್ಗೆ ನಮ್ಮ ಜ್ಞಾನವು ಮೂಲಭೂತ ನೈಸರ್ಗಿಕ ಇತಿಹಾಸ ಮತ್ತು ವಿತರಣೆಗೆ ಸೀಮಿತವಾಗಿದೆ. ಇತ್ತೀಚಿನ ಅಧ್ಯಯನವು ತಮಿಳುನಾಡು ಮತ್ತು ಕೇರಳದ ಪಶ್ಚಿಮ ಘಟ್ಟಗಳಲ್ಲಿ ಈ ಎರಡು ಪ್ರಭೇದಗಳ ವಿತರಣೆಯನ್ನು ಮೌಲ್ಯಮಾಪನ ಮಾಡಿದೆ. ಪಿ. ಎಫ್. ಫುಸ್ಕೊಕಾಪಿಲಸ್ ಪಿ. ಫಿಲಿಪ್ಪೆನ್ಸಿಸ್ಗಿಂತ ಕಡಿಮೆ ಬಾರಿ ಕಂಡುಬರುತ್ತದೆ, ಇದು ಎರಡು ಪ್ರಭೇದಗಳಲ್ಲಿ ಅಪರೂಪವೆಂದು ಸೂಚಿಸುತ್ತದೆ, ಪಿ. ಎಫ್. ಫುಸ್ಕೊಕಾಪಿಲಸ್ ನಿತ್ಯಹರಿದ್ವರ್ಣ ಕಾಡುಗಳು ಮತ್ತು ತೇವಾಂಶ ಪರ್ಣಪಾತಿ ಕಾಡುಗಳಲ್ಲಿ ಮಾತ್ರ ಕಂಡುಬರುತ್ತದೆ, ಆದರೆ ಪಿ. ಫಿಲಿಪ್ಪೆನ್ಸಿಸ್ ವಿವಿಧ ಆವಾಸಸ್ಥಾನಗಳಲ್ಲಿ ಕಂಡುಬರುತ್ತದೆ (ನಿತ್ಯಹರಿದ್ವರ್ಣ ಕಾಡುಗಳು, ತೇವಾಂಶ ಪರ್ಣಪಾತಿ ಕಾಡುಗಳು, ಶೋಲಾ ಕಾಡುಗಳು ಮತ್ತು ತೋಟಗಳು).



ಚಿತ್ರ ಕೃಪೆ: :- ವಿಜ್ ವಿಶ್ವನಾಥ್

ಇದು ಪಿ. ಫಿಲಿಪ್ಪೆನ್ಸಿಸ್ಗಿಂತ ಕಿರಿದಾದ ಎತ್ತರದ ವ್ಯಾಪ್ತಿಯ 5ರಲ್ಲಿ ಸಹ ಕಂಡುಬಂದಿತು; ಪಿ. ಎಫ್. ಫುಸ್ಕೊಕಾಪಿಲ್ಲಸ್ 900 ಮೀಟರ್ ವರೆಗೆ ಮಾತ್ರ ಕಂಡುಬಂದಿತು, ಆದರೆ ಪಿ. ಫಿಲಿಪ್ಪೆನ್ಸಿಸ್ 2050 ಮೀಟರ್ ವರೆಗೆ ಎದುರಾಯಿತು.

ಆದಾಗ್ಯೂ, ಪಿ. ಎಫ್. ಫುಸ್ಕೊಕಾಪಿಲ್ಲಸ್ ಕೆಲವು ಸ್ಥಳಗಳಲ್ಲಿ ಮಾತ್ರ ಕಂಡುಬಂದಿದೆಯಾದರೂ, ಇವು ಕೇರಳ ಮತ್ತು ತಮಿಳುನಾಡಿನ ಪಶ್ಚಿಮ ಘಟ್ಟಗಳ ವ್ಯಾಪ್ತಿಯಲ್ಲಿ ಹರಡಿವೆ, ಇದು ಶೆಂಡರ್ನಿ ವನ್ಯಜೀವಿ ಅಭಯಾರಣ್ಯ ಎಂದು ವರದಿಯಾದ ದಕ್ಷಿಣದ ತಾಣವಾಗಿದೆ ಮತ್ತು ಉತ್ತರದ ಅರಳಂ ವನ್ಯಜೀವಿ ಅಭಯಾರಣ್ಯವಾಗಿದೆ. ಕರ್ನಾಟಕ ಅಥವಾ ಗೋವಾದ ಕಾಡುಗಳಿಂದ ಈ ಪ್ರಭೇದದ ಯಾವುದೇ ಔಪಚಾರಿಕ ಅಥವಾ ಪ್ರಕಟಿತ ದಾಖಲೆಗಳು ಅಸ್ತಿತ್ವದಲ್ಲಿಲ್ಲ. ಕರ್ನಾಟಕ ಗಡಿಯ ಸಮೀಪವಿರುವ ಕೇರಳದ ಕಾಡುಗಳಲ್ಲಿ ಈ ಪ್ರಭೇದಗಳು ಕಂಡುಬರುವ ಹೆಚ್ಚಿನ ಸಂಭವನೀಯತೆ ಇದೆ ಎಂದು ಹಿಂದಿನ ಸಮೀಕ್ಷೆಯ ಫಲಿತಾಂಶಗಳಿಂದ ತರ್ಕಿಸಲಾಗಿದೆ.

ಇಡೀ ಪಶ್ಚಿಮ ಘಟ್ಟಗಳಲ್ಲಿ ಪ್ರಾಚೀನ ತಗ್ಗು ಪ್ರದೇಶ ಮತ್ತು ಎತ್ತರದ ಕಾಡುಗಳ ದೊಡ್ಡ ಪ್ರದೇಶಗಳನ್ನು ಹೊಂದಿರುವ ಕರ್ನಾಟಕದ ಕಾಡುಗಳನ್ನು ಬಹುಶಃ ಅತ್ಯಂತ ಹೆಚ್ಚು ಉತ್ಪಾದಕ ಮತ್ತು ಕಡಿಮೆ ಬಳಕೆಯಾಗುವ ಪ್ರದೇಶವೆಂದು ವಿವರಿಸಲಾಗಿದೆ ಮತ್ತು ಕರ್ನಾಟಕದ ಸಸ್ತನಿಗಳ ಕುರಿತಾದ ಸಂಶೋಧನೆಯ ಕೊರತೆಯನ್ನು ಎತ್ತಿ ತೋರಿಸಿವೆ ಮತ್ತು ಮಾಹಿತಿಯ ಅಗತ್ಯತೆಯ ಬಗ್ಗೆ ಪ್ರತಿಕ್ರಿಯಿಸಿವೆ.

ಮೇಲಿನ ವಾದಗಳ ಬೆಳಕಿನಲ್ಲಿ ಈ ಪ್ರಸ್ತುತ ಮಾಹಿತಿಯನ್ನು ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿ ಎರಡೂ ಜಾತಿಯ ಹಾರುವ ಅಳಿಲುಗಳ ವಿತರಣೆಯನ್ನು ದಾಖಲಿಸಲು ಪ್ರಾರಂಭಿಸಲಾಯಿತು.



ಚಿತ್ರ ಕೃಪೆ: :- ವಿಜ್ ವಿಶ್ವನಾಥ್

**ಭಾರತೀಯ ದೈತ್ಯ ಫ್ಲೈಯಿಂಗ್ ಅಳಿಲು ಪೆಟೌರಿಸ್ಟಾ ಫಿಲಿಪೆನ್ಸಿಸ್:**

**ಗಾತ್ರ:** ಸುಮಾರು 30-45 ಸೆಂ. ಮೀ. ದೇಹದ ಉದ್ದ ಮತ್ತು 60 ಸೆಂ. ಮೀ. ವರೆಗಿನ ಬಾಲವನ್ನು ಹೊಂದಿರುವ ಅತಿದೊಡ್ಡ ಹಾರುವ ಅಳಿಲುಗಳಲ್ಲಿ ಒಂದಾಗಿದೆ.

**ಆವಾಸಸ್ಥಾನ:** ಮಧ್ಯ ಮತ್ತು ದಕ್ಷಿಣ ಭಾರತದಾದ್ಯಂತ ಉಷ್ಣವಲಯದ ಮತ್ತು ಉಪಉಷ್ಣವಲಯದ ಕಾಡುಗಳಲ್ಲಿ ಕಂಡುಬರುತ್ತದೆ. ನಿತ್ಯಹರಿದ್ವರ್ಣ, ಅರೆ-ನಿತ್ಯಹರಿದ್ವರ್ಣ ಮತ್ತು ಎಲೆಯುದುರುವ ಕಾಡುಗಳು ಅರಣ್ಯದ ಅಂಚುಗಳಲ್ಲಿ ಆಗಾಗ್ಗೆ ಕಂಡುಬರುತ್ತವೆ.

**ಆಹಾರ:** ಮುಖ್ಯವಾಗಿ ಹಣ್ಣುಗಳು, ಬೀಜಗಳು, ಎಲೆಗಳು ಮತ್ತು ತೊಗಟೆಯನ್ನು ತಿನ್ನುತ್ತದೆ, ಇದು ಬೀಜ ಪ್ರಸರಣಕ್ಕೆ ಕಾರಣವಾಗುತ್ತದೆ.

**ನಡವಳಿಕೆ:** ರಾತ್ರಿಯ ಮತ್ತು ಅರ್ಬೋರಿಯಲ್, ಇದು ಆಹಾರದ ಹುಡುಕಾಟದಲ್ಲಿ ಮರಗಳ ನಡುವೆ ಹಾರುತ್ತದೆ, 60 ಮೀಟರ್‌ಗಳಷ್ಟು ದೂರವನ್ನು ಕ್ರಮಿಸುತ್ತದೆ.

ಗೂಬೆಗಳು ಅವುಗಳ ಮೇಲೆ ಪೂರ್ವಭಾವಿಯಾಗಿರುವುದು ಕಂಡುಬಂದಿದೆ ಮತ್ತು ಅವು ಗೂಬೆಯ ಕರೆಗಳನ್ನು ನೋಡಿ ಅಥವಾ ಕೇಳಿದ ನಂತರ ಎಚ್ಚರಿಕೆಯ ಕರೆಗಳನ್ನು ನೀಡುತ್ತಿರುವುದು ಕಂಡುಬರುತ್ತದೆ.

ಭಾರತೀಯ ದೈತ್ಯ ಹಾರುವ ಅಳಿಲು ವ್ಯಾಪಕವಾಗಿ ಹರಡಿದೆ ಮತ್ತು ಅರಣ್ಯ ಪರಿಸರ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ, ಇದು ಅದರ ಆವಾಸಸ್ಥಾನದಲ್ಲಿ ಕೀಸ್ಟೋನ್ ಪ್ರಭೇದವಾಗಿದೆ.

ತಿರುವಾಂಕೂರು ವಿಮಾನಯಾನ ಅಳಿಲು ಪೆಟಿನೋಮಿಸ್ ಫುಸ್ಕೊಕಾಪಿಲ್ಲಸ್:
ಗಾತ್ರ: ಸುಮಾರು 25-30 ಸೆಂ ಉದ್ದದ ಅತ್ಯಂತ ದೊಡ್ಡ ಹಾರುವ ಅಳಿಲುಗಳಿಗಿಂತ ಚಿಕ್ಕದಾಗಿದೆ.
ಆವಾಸಸ್ಥಾನ: ಇದು ಪಶ್ಚಿಮ ಘಟ್ಟಗಳ ನಿತ್ಯಹರಿದ್ವರ್ಣದ ಕಾಡುಗಳಿಗೆ ಸೀಮಿತವಾಗಿದೆ.
ಆಹಾರ: ಹಣ್ಣುಗಳು, ಬೀಜಗಳು ಮತ್ತು ಹೂವುಗಳು ಇದರ ಪ್ರಾಥಮಿಕ ಆಹಾರ ಮೂಲಗಳಾಗಿವೆ.
ನಡವಳಿಕೆ: ಬಹುತೇಕ ಸಂಪೂರ್ಣವಾಗಿ ಮೇಲಾವರಣದ ನಿವಾಸಿ. ಸಮಗ್ರ ಅಧ್ಯಯನಗಳ ಕೊರತೆಯಿಂದಾಗಿ ಇದನ್ನು "ದತ್ತಾಂಶ ಕೊರತೆ" ಎಂದು ಪಟ್ಟಿ ಮಾಡಲಾಗಿದೆ.

ಈ ಪ್ರಭೇದವು ಅಪರೂಪವಾಗಿದೆ ಮತ್ತು ಅರಣ್ಯನಾಶದಿಂದ ಗಮನಾರ್ಹ ಬೆದರಿಕೆಗಳನ್ನು ಎದುರಿಸುತ್ತಿದೆ, ಇದು ಸಂರಕ್ಷಣಾ ಪ್ರಯತ್ನಗಳಿಗೆ ಹೆಚ್ಚಿನ ಆದ್ಯತೆಯ ಪ್ರಭೇದವಾಗಿದೆ.

**ಡಾ. ಶ್ರೀನಿವಾಸ್ ಬಿ. ನೆಗಳೂರ**
**ಸಹಾಯಕ ಪ್ರಾಧ್ಯಾಪಕ, ಪ್ರಾಣಿಶಾಸ್ತ್ರ ವಿಭಾಗ**
**ವಿಜಯ ಮಹಾಂತೇಶ್ ಕೃಪಪೋಷಿತ್ ಎಸ್.ಆರ್. ವಸ್ತ್ರದ್ ಕಲಾ, ವಿಜ್ಞಾನ ಮತ್ತು ವಿ.ಎಸ್. ಬೆಳ್ಳಿಹಾಳ ವಾಣಿಜ್ಯ ಕಾಲೇಜು**
**ಹುನಗುಂದ-587118**

ಲೇಖನ 04

# ಸರೋವರದ ಮಡಿಲಲಿ ಅರಳಿದ ಜಲಸಿರಿ ಸತ್ಯನಾರಾಯಣ ಪೂಜಾಪುಷ್ಪ ಕಲ್ಹಾರ

ಪ್ರಕೃತಿಯ ಸೌಂದರ್ಯವು ಕೇವಲ ಭೂಮಿಯ ಮೇಲಷ್ಟೆ ಅಲ್ಲ ನೀರಿನ ಅಂತರಾಳದಲ್ಲಿಯೂ ಅಡಗಿದೆ. ವರುಣ ದೇವನ ಕೃಪೆಯಿಂದ ತುಂಬಿ ತುಳುಕುವ ಕೆರೆಕುಂಟೆಗಳು ಕೇವಲ ಜಲರಾಶಿಯಲ್ಲ, ಅವು ಪ್ರಕೃತಿಯ ಅದ್ಭುತ ಸಸ್ಯಲೋಕದ ಆಶ್ರಯತಾಣಗಳು. ನೀರಿನ ಮೇಲೆ ತೇಲುವ ಎಲೆಗಳು ಮತ್ತು ಅವುಗಳ ನಡುವೆ ಇಣುಕುವ ವರ್ಣರಂಜಿತ ಜಲಪುಷ್ಪಗಳು ಭೂಮಿಗೆ ಒಲಿದ ದಿವ್ಯ ಆಭರಣಗಳಿಂತಿವೆ. ಈ ಜಲ ಸಸ್ಯಗಳು ನೀರಿನ ಸೌಂದರ್ಯ ಹೆಚ್ಚಿಸುವದಲ್ಲದೇ ಜಲಚರ ಪ್ರಾಣಿಗಳಿಗೆ ಆಶ್ರಯ ಮತ್ತು ಆಹಾರವನ್ನು ನೀಡುವ ಮೂಲಕ ಪರಿಸರ ವ್ಯವಸ್ಥೆಯ ಸಮತೋಲನವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಭೂಮಿಯ ಮೇಲಿನ ಜೀವವೈವಿಧ್ಯತೆಯಂತೆ ಜಲ ವೈವಿಧ್ಯತೆ ವ್ಯವಸ್ಥೆಯೂ ಪ್ರಮುಖವಾಗಿದೆ. ಸರೋವರದ ಮಡಿಲಲ್ಲಿ ಅರಳಿದ ಜಲಸಿರಿ ನಿಸರ್ಗ ಕಾವ್ಯ ಕಲ್ಹಾರ. ನೀರಿನ ಒಡಲಲ್ಲಿ ಮೌನವಾಗಿ ಅರಳಿ ಇಡೀ ಸರೋವರಕ್ಕೆ ಶ್ವೇತ ವರ್ಣದ ಲೇಪನ ಮಾಡುವ ಕಲ್ಹಾರ ಇದೊಂದು ಪ್ರಕೃತಿಯ ಅದ್ಭುತ ಸೃಷ್ಟಿ.ಮುಂಜಾನೆಯ ಮಂಜಿನ ಹನಿಗಳು ಇದರ ದಳಗಳ ಮೇಲೆ ಹೊಳೆಯುವ ದೃಶ್ಯ, ಯಾವುದೇ ಕಲಾಕಾರನ ಕಲ್ಪನೆಗೂ ಮೀರಿದ ಕಲಾಸೌಂದರ್ಯವದು. ನಮಿಸುವೆ ಕರವೀರಪುರನಿಲಯೇ ಪೂಜಿಪೆನು ನಿನ್ನ, ಮಲ್ಲಿಗೆ ಕೇದಿಗೆ ಕಲ್ಹಾರ ಪುಷ್ಪ ತಂದು ಎಲ್ಲ ಸಮರ್ಪಿಸುವೆ, ಪೂಜೆಪೆನು ನಿನ್ನ ನಡೆದು ಬಾರಮ್ಮ ತಾಯೇ" ಕೊಲ್ಲಾಪುರ ಮಹಾಲಕ್ಷ್ಮೀ ಕುರಿತು ಕವಿಯೋರ್ವ ಬರೆದ ಸ್ತುತಿಯಿದು. ಅಶುದ್ಧವಾದ ಕೆಸರಿನಲ್ಲಿ ಜನ್ಮ ತಳೆದರೂ ತನ್ನ ಪಾವಿತ್ರ್ಯತೆಯನ್ನು ಕಿಂಚಿತ್ತೂ ಬಿಟ್ಟುಕೊಡದ ಅಚಲತೆ ಕಲ್ಹಾರ ಪುಷ್ಪದ್ದು.. ಜೀವನದ ಸವಾಲುಗಳ ನಡುವೆಯೂ ಹೇಗೆ ಪರಿಶುದ್ಧವಾಗಿ ಬದುಕಬೇಕೆಂಬುದಕ್ಕೆ ಈ ಶ್ವೇತ ಕಮಲ ಒಂದು ಜೀವಂತ ಪಾಠವಾಗಿದೆ.

ದೇವತೆಗಳ ಆಸನವಾಗಿ, ಜ್ಞಾನ ದೇವತೆ ಸರಸ್ವತಿಯ ಪ್ರಿಯ ಪುಷ್ಪವಾಗಿ ಕಂಗೊಳಿಸುವ ಕಲ್ಹಾರ ಮನುಷ್ಯನ ಆಧ್ಯಾತ್ಮಿಕ ಪಯಣದ ಸಂಕೇತ. ಧಾರ್ಮಿಕ ಪ್ರಾಮುಖ್ಯತೆ ಪಡೆದಿರುವ ಕಲ್ಲಾರ ಹಿಂದೂ ಧರ್ಮದ ಅನೇಕ ಪೂಜೆಪುನಸ್ಕಾರಗಳಲ್ಲಿ ವಿವಿಧ ವೃತ ನೇಮಗಳಲ್ಲಿ ಅರ್ಚನೆಯ ಪುಷ್ಪವೆಂಬ ವಿಶೇಷ ಸ್ಥಾನವಿದೆ.

ಸಸ್ಯ ಶಾಸ್ತ್ರೀಯ ವನ ನಿರ್ಮಾಣದಲ್ಲೂ ವೃಕ್ಷಾರೋಪಣಗೊಳ್ಳುವ ಜಲಜ ಕುಸುಮ ಸತ್ಯನಾರಾಯಣ ಪೂಜಾಪುಷ್ಪ ಕಲ್ಹಾರ. ಕಲ್ಹಾರ ಪುಷ್ಪಗಳಿಗೆ ಭಾರತದ ಉಪಖಂಡ, ಆತ್ಮೀಯ ಏಷ್ಯಾ, ಆಫ್ರಿಕಾ ದೇಶವೇ ತವರೂರು. ಆಳವಿಲ್ಲದ, ನಿಶ್ಚಲನೀರು, ಚೌಗು ಪ್ರದೇಶ, ಕೊಳಗಳಲ್ಲಿ ಬೆಳೆಯುವ ಕಲ್ಹಾರದ ನಾಮಧೇಯಗಳನ್ನು ದರ್ಶನ ಮಾಡೋಣ.

ನಿಂಫೇಯೇಸಿ ಸಸ್ಯ ಕುಟುಂಬದ ಸದಸ್ಯ ನಿಂಫಿಯಾ ಎಂಬುದು ಗ್ರೀಕ್ ಪುರಾಣದಲ್ಲಿ ಉಲ್ಲೇಖವಾಗಿರುವ ನೀರಿನ ದೇವತೆಯ ಹೆಸರು. ಈ ದೇವತೆಯ ನೆನಪಿಗಾಗಿ ನೀರಿನಲ್ಲಿ ಬೆಳೆಯುವ ಕಮಲದ ಕುಲಕ್ಕೆ ಜಾತಿಸೂಚಕವಾಗಿ ನಾಮಕರಣ ಮಾಡಲಾಗಿದೆ. ಇದರ ವೈಜ್ಞಾನಿಕ ಹೆಸರು ನಿಂಫಿಯಾ ಅಲ್ಬಾ. ಹಿಂದಿಯಲ್ಲಿ ಕುಮುದಿನಿ, ತೆಲುಗಿನಲ್ಲಿ ಕೌವಾ ಪೂವ್ವು, ಮಲಯಾಳಿಯಲ್ಲಿ ಕಾಮೋದ್, ಇಂಗ್ಲಿಷಿನಲ್ಲಿ ವೈಟ್ ವಾಟರ್ ಲಿಲ್ಲಿ, ಕನ್ನಡದಲ್ಲಿ ಬಿಳಿ ಕಮಲ, ಸಂಸ್ಕೃತಭಾಷೆಯಲ್ಲಿ ಬಿಳಿಯ ಬಣ್ಣ ಹೊಂದಿರುವರಿಂದ ಶ್ವೇತ ಕುವಲಯಾ, ಶ್ವೇತ ಜಲಜ, ನೀರಿನಲ್ಲಿ ಹುಟ್ಟುವದರಿಂದ ಕುಮುದ, ಕಲ್ಹಾರ, ಅಂಬೋದ್, ಅಬ್ಜ, ಅಂಬುಜ, ಜಲೇರುಹ, ಸೋಮಪ್ರಿಯವೆಂದು, ಕೈರವ, ಪಂಕಜ, ಚಂದ್ರಕಾಂತ, ಶಶಿಪ್ರಿಯ ಕಲ್ಹಾರ ನಾಮಾವಳಿಗಳು.

ಬೌದ್ಧ ಧರ್ಮದಲ್ಲಿ ಮತ್ತು ಹಿಂದೂ ಸಂಪ್ರದಾಯಗಳಲ್ಲಿ ಹಬ್ಬ ಹರಿದಿನಗಳಲ್ಲಿ, ವೃತ ನೇಮಗಳಲ್ಲಿ ವಿಶೇಷವಾಗಿ ಬಳಕೆಯಾಗುವ ಜಲಪುಷ್ಪ ಕಲ್ಹಾರವನ್ನು ತುಲಸಿ ವಿವಾಹದಲ್ಲಿ ಓಂ ಭೂಮ್ಯೈ ನಮ: ಕಲ್ಹಾರ ಪುಷ್ಪಂ ಸಮರ್ಪಯಾಮಿ, ಸಂಕಷ್ಟ ಚತುರ್ಥೀಯಲ್ಲಿ ಓಂ ಏಕದಂತಾಯ ನಮ: ಕಲ್ಹಾರ ಪುಷ್ಪಂ ಸಮರ್ಪಯಾಮಿ, ಶ್ರೀ ಹರಿತಾಳಕ ಗೌರಿವೃತದಲ್ಲಿ ಶಶಿಶೇಖರಾಯ ನಮ: ಕಲ್ಹಾರ ಪುಷ್ಪಂ ಸಮರ್ಪಯಾಮಿ, ಮಾರ್ಗಶೀರ್ಷ ಮಹಾಲಕ್ಷ್ಮೀ ವೃತದಲ್ಲಿ ಓಂ ಮಾಯಾಯೈ ನಮ: ಕಲ್ಹಾರ ಪುಷ್ಪಂ ಸಮರ್ಪಯಾಮಿ, ಶ್ರೀ ಸತ್ಯನಾರಾಯಣ ವೃತದಲ್ಲಿ ಓಂ ಸತ್ಯರೂಪಾಯ ನಮ: ಕಲ್ಹಾರ ಪುಷ್ಪಂ ಸಮರ್ಪಯಾಮಿ, ಅನಂತ ಪದ್ಮನಾಬ ವೃತದಲ್ಲಿ ಓಂ ಸಹಸ್ರ ಶಿರಸೇ ನಮ: ಎಂದು, ನೃಸಿಂಹ ಜಯಂತಿಯಲ್ಲಿ ಓಂ ಬ್ರಹ್ಮಣ್ಯಾಯ ನಮಃ ಕಲ್ಹಾರ ಪುಷ್ಪಂ, ನಿತ್ಯ ಸೋಮವಾರ ವೃತದಲ್ಲಿ ಕಪರ್ದಿನೇ ನಮಃ ಕಲ್ಹಾರ ಪುಷ್ಪಂ ಸಮರ್ಪಯಾಮಿ ಎಂದು ಹಾಗೂ ವಾಮನ ಜಯಂತಿಯ ಪುಷ್ಪ ಪೂಜೆಯಲ್ಲಿ ಕಲ್ಹಾರ ಪುಷ್ಪದಿಂದ ಅರ್ಚನೆ ಮಾಡಬೇಕೆಂದು ಧಾರ್ಮಿಕ ಗ್ರಂಥಗಳಲ್ಲಿ ಉಲ್ಲೇಖವಿದೆ.

ಶಾಸ್ತ್ರೀಯ ವನಗಳಾದ ಸಪ್ತಋಷಿ ವನದಲ್ಲಿ ಅತ್ರಿ ಋಷಿ ಪ್ರತಿನಿಧಿಯಾಗಿ ಮತ್ತು ಸರ್ವೌಷಧಿ ವನ, ನೃಸಿಂಹ ವನ ನಿರ್ಮಾಣದಲ್ಲಿ ಕಲ್ಹಾರ ಪುಷ್ಪದ ಗಿಡವನ್ನು ವೃಕ್ಷಾರೋಪಣ ಮಾಡಬೇಕೆಂದು ವನ್ಯಶಾಸ್ತ್ರ ಸಂಹಿತಾದಲ್ಲಿ ಬರೆಯಲಾಗಿದೆ. ಪದ್ಮ ಸಂಹಿತೆ 14 ನೇ ಅಧ್ಯಾಯದಲ್ಲಿ ಉಲ್ಲೇಖಿಸಿದಂತೆ ಪಂಚರಾತ್ರ ನಾರಾಯಣ ಆರಾಧನೆಯಲ್ಲಿ ಚೈತ್ರ ಮಾಸದಲ್ಲಿ ವಸಂತೋತ್ಸವ, ದಮನೋತ್ಸವ ಜೊತೆಯಲ್ಲಿ ಕಲ್ಹಾರೋತ್ಸವ ಎಂಬ ಉತ್ಸವವನ್ನು ಆಚರಿಸುವರು. ಶತ್ರುದಾಳಿ ಭಯ, ಕ್ಷಾಮ ಉಂಟಾದಾಗ ಕಲ್ಹಾರೋತ್ಸವ ಮಾಡುವ ಸಂಪ್ರದಾಯವಿತ್ತೆಂದು ತಿಳಿಸಿದೆ.

ದೀಕ್ಷಾ ಸಮಾರಂಭಗಳಲ್ಲಿ, ದೇವಾಲಯಗಳ ಮತ್ತು ಪ್ರತಿಮೆಗಳ ನಿರ್ಮಾಣ, ಪವಿತ್ರಿಕರಣಗಳಲ್ಲಿ ಕಲ್ಹಾರ ಪುಷ್ಪ ಉಪಯೋಗಿಸುವ ಕುರಿತು ವಿಶ್ವಾಮಿತ್ರ ಸಂಹಿತೆಯಲ್ಲಿ ಉಲ್ಲೇಖಿದಲಾಗಿದೆಯೆಂದು ತಿಳಿಸುತ್ತದೆ. ಜಾತಿದ್ವಯಂ ಕೇತಕೇ ದ್ವೇ ಕಲ್ಹಾರ ಚಂಪಕೋತ್ಪಲೇ ಕುಂದ ಮಂದಾರ ಪುನ್ನಾಗ ಪಾಟಲಾ ನಾಗಚಂಪಕಮ್" ಪೂಜಾ ವಿಧಿಗಳಲ್ಲಿ ಎರಡು ಜಾಜಿ ಹೂವು ಎರಡು ಕೇದಿಗೆ, ಎರಡು ಬಿಳಿ ಕಮಲ(ಕಲ್ಹಾರ) ಮಲ್ಲಿಗೆ, ಸಂಪಿಗೆ, ಮಂದಾರ, ಪುನ್ನಾಗ, ಪಾಟಲಿ ನಾಗಸಂಪಿಗೆ ,

ಪುಷ್ಪವನ್ನು ಬಳಸಬೇಕೆಂದು ಶಾರದಾತಿಲಕ ಗ್ರಂಥದಲ್ಲಿ ಬರೆಯಲಾಗಿದೆ. ಜಾತಿ ಪುಷ್ಪಾಣಿ ಸರ್ವಾಣಿ ಕುಂದಪುಷ್ಪಂ ತಥೈವ ಚ/ ಕಲ್ಹಾರೇ ಶ್ವೇತರಕ್ತೇ ತಥಾಂಬುಜೇ//" ಜಾಜಿ, ಕುಂದ ಮಲ್ಲಿಗೆ, ಕಲ್ಹಾರ, (ಬಿಳಿ ಕಮಲ) ಕೆಂದಾವರೆ ವಿಷ್ಣುವಿಗೆಯ ಇಷ್ಟವಾದ ಪುಷ್ಪಗಳು. ವಾಗ್ಭಟ ಚರಕ ಸಂಹಿತೆ,ಭಾವಪ್ರಕಾಶದ ಪುಷ್ಪ ವರ್ಗದಲ್ಲಿ, ಧನ್ವಂತರಿ ನಿಘಂಟುವಿನ ಕರವೀರಾದಿ ವರ್ಗದಲ್ಲಿ ಸುಶ್ರುತ ಸಂಹಿತೆಯ ಉತ್ಪಲಾದಿ ವರ್ಗದಲ್ಲಿ ಕಲ್ಹಾರ ಪುಷ್ಪದ ಕುರಿತು ಮಾಹಿತಿ ಲಭ್ಯವಿದೆ.

"ಪಯಸ್ಯೋರ್ಧಕೇ ಚ್ಛಾಗೇ ಹ್ರೀವೇರೋತ್ಪಲನಾಗರೈ:/ ಪೇಯಾರಕ್ತಾತೀಸಾರಘ್ನೀಪ್ರಶ್ನಿಪರ್ಣ್ಯಾ ಚ ಸಾಧಿತಾ" ಹ್ರೀವೇರ, ಬಿಳಿಕಮಲ ಗಡ್ಡೆಗಳಿಂದ ಪ್ರಶ್ನಪರ್ಣಿಗಳಿಂದ ಅರ್ಧದಷ್ಟು ನೀರು ಬೆರೆಸಿರುವ ಆಡಿನ ಹಾಲಿನಲ್ಲಿ ತಯಾರಿಸಿದ ಪೇಯವು ರಕ್ತಾತಿಸಾರವನ್ನು ಕಡಿಮೆ ಮಾಡುತ್ತದೆ. "ಪ್ರಪೌಂಡಿರೀಕಂ ಸೂಕ್ಷ್ಮೈಲಾಂ ವಿಡಗ್ಗಂ ಬಿಲ್ವಪುತ್ಪಲಮ್/ ಹ್ರಬೇರಮಭಯಂ ವನ್ಯಮ ತ್ವಙ್ಮುಸ್ತಂ ಸಾರಿವಾಂ ಸ್ಥಿರಾಮ್" ಪುಂಡರೀಕ, ಸಣ್ಣ ಏಲಕ್ಕಿ, ವಾಯುವಿಡಂಗ, ಬಿಳಿಕಮಲ, ಹೀಬೇರ ಉಶೀರ, ಮುಸ್ತ ತ್ವಕ್, ಸುಗಂಧಿ ಬೇರು ಇವುಗಳು ಅಣುತೈಲ ತಯಾರಿಕೆಯಲ್ಲಿ ಬಳಕೆಯಾಗುತ್ತದೆ ಎಂದು ಚರಕ ಸಂಹಿತೆಯಲ್ಲಿ ಬರೆಯಲಾಗಿದೆ.

ರಕ್ತದ ಅಸ್ವಸ್ಥತೆ, ಅತಿಸಾರ, ಚರ್ಮರೋಗಗಳು, ನರರೋಗ, ಮೂಗಿನಿಂದ ರಕ್ತಸ್ರಾವ ತೊಂದರೆಗಳಲ್ಲಿ ಉಪಯುಕ್ತ ಮೂಲಿಕೆಯಾಗಿದೆ. ಮುಟ್ಟಿನ ರಕ್ತಸ್ರಾವದಲ್ಲಿ ಬಳಸುವ ದರ್ವ್ಯಾದಿ ಕಷಾಯ, ಮಹಿಳೆ ಮತ್ತು ಪುರುಷರ ಬಂಜೆತನ ನಿವಾರಣೆಯಲ್ಲಿ ಫಲ ಕಲ್ಯಾಣಘೃತ, ರಕ್ತಸ್ರಾವ ಮೂಲವ್ಯಾಧಿಗೆ ಉಪಯೋಗಿಸುವ ಸಮಂಗಾದಿ ಚೂರ್ಣ, ಧೀರ್ಘಕಾಲದ ಜ್ವರಕ್ಕೆ ಚಂದನಾದಿ ಲೇಹ್ಯ, ವಾಂತಿ ತಲೆತಿರುಗುವಿಕೆಯಲ್ಲಿ ಪುಗಖಂಡ ಇವು ಕಲ್ಹಾರಯುಕ್ತ ಆಯುರ್ವೇದಿಯ ಔಷಧಗಳು.

ಭೂಮಿಯ ಮೇಲಿನ ಸಸ್ಯವಾಗಲಿ, ಜಲದೊಳಗಿನ ಸಸ್ಯವಾಗಲಿ ಮನುಕುಲದ ಒಳಿತಿಗಾಗಿ ತಮ್ಮ ಸೇವೆ ಮಾಡುತ್ತಿರುತ್ತವೆ. "ಪತ್ರಂ ಪುಷ್ಪಂ ಫಲಂ ಚೈವ ರಜೋರೇಣೂಸಮಾಗಮಾ:/ ತೋಷಯಂತಿ ಚ ಪಾತಾರಂ ಪ್ರತ್ಯಹಂ ಪ್ರತಿಕರ್ಮಣಿ" ಹಸಿರಾದ ಎಲೆಗಳು, ಸುಂದರವಾದ ಹೂವುಗಳು, ಒಳ್ಳೆಯ ಫಲ, ರಜಸ್ಸು ಮತ್ತು ರೇಣುವಿನ ಕೂಡುವಿಕೆಗಳು ಪ್ರತಿನಿತ್ಯವೂ ಎಲ್ಲ ಕರ್ಮಗಳಲ್ಲಿಯೂ ಸಂರಕ್ಷಕನನ್ನು ಸಂತೋಷಗೊಳಿಸುತ್ತವೆ. ಆದ್ದರಿಂದ ಜಲ ಸಸ್ಯವೆಂದು ನಿರ್ಲಕ್ಷ್ಯ ಬೇಡ ಅವು ನಮಗೆ ಜೀವ ಉಳಿಸುವಲ್ಲಿ ಸಹಾಯಕ ಎಂಬುದನ್ನು ಮರೆಯದಿರೋಣ. ಪರ್ಣಬೀಜದಿಂದ ಗಡ್ಡೆಗಳಿಂದ ಮರುಹುಟ್ಟು ಪಡೆಯಬಹುದು. ಕಲ್ಹಾರವು ಕೇವಲ ಕೆಸರಿನಲ್ಲಿ ಅರಳುವ ಹೂವಲ್ಲ: ಅದು ಅಶುದ್ಧತೆಯ ನಡುವೆಯೂ ಪರಿಶುದ್ಧತೆಯನ್ನು ಕಾಯ್ದುಕೊಳ್ಳುವ ಜೀವನದ ಸಂಕೇತ. ಚಂದ್ರನ ಬೆಳಕಿಗೆ ಸ್ಪಂದಿಸುತ್ತಾ ರಾತ್ರಿಯ ಮೌನದಲ್ಲಿ ಅರಳುವ ಈ ಪುಷ್ಪ, ನಮಗೆ ಸೌಂದರ್ಯದ ಜೊತೆಗೆ ತಾಳ್ಮೆ ಮತ್ತು ಪ್ರಶಾಂತತೆಯ ಪಾಠವನ್ನು ಕಲಿಸುತ್ತದೆ. ಪ್ರಕೃತಿಯ ಈ ಶ್ವೇತ ಸುಂದರಿಯನ್ನು ಸಂರಕ್ಷಿಸುವದು ಎಂದರೆ ನಮ್ಮ ಸಾಂಸ್ಕೃತಿಕ ಮತ್ತು ನೈಸರ್ಗಿಕ ಪರಂಪರೆಯನ್ನು ಗೌರವಿಸಿದಂತೆ. "ಪ್ರಕೃತಿಯ ಸೌಂದರ್ಯ ಕಲ್ಹಾರ. ಬಾಳಿನ ಹಾದಿಗೆ ಬೆಳಕಿನ ಹಾರ" ಜಲಸಸ್ಯಗಳನ್ನು ಮುಂದಿನ ಪೀಳಿಗೆಗೆ ಉಳಿಸುವ ಕಾರ್ಯವಾಗಲಿ.

**ಉಮಾಪತಿ ಭಟ್ಟ ಕೆ ವಿ**
ಅಧ್ಯಕ್ಷರು ಮತ್ತು ಪರಿಸರ ಕಾರ್ಯಕರ್ತರು
ಸಮಗ್ರ ವಿಕಾಸ ಟ್ರಸ್ಟ್, ಶಿರಸಿ

ಲೇಖನ 05

# ಅರಣ್ಯದ ಮಹಾಕಾಯ ಕಾಡುಕೋಣ

ಸ್ನೇಹಿತರೇ, ಕಾಡುಕೋಣಗಳು (Gaur) ಎಮ್ಮೆ ಕುಟುಂಬದಲ್ಲಿಯೇ ಅತಿ ದೊಡ್ಡ ಪ್ರಾಣಿಗಳು. ಇವುಗಳಲ್ಲಿ ಮೂರು ಉಪಜಾತಿಗಳು ಕಂಡುಬರುತ್ತವೆ:

ನೇಪಾಳ ಮತ್ತು ಭಾರತದಲ್ಲಿ ಕಂಡುಬರುವ ಭಾರತೀಯ ಕಾಡುಕೋಣ, ಥೈಲ್ಯಾಂಡ್ ಮತ್ತು ಮಲೇಶಿಯಾದಲ್ಲಿ ಕಂಡುಬರುವ ಮಲೇಶಿಯನ್ ಕಾಡುಕೋಣ, ಮ್ಯಾನ್ಮಾರ್‌ನಿಂದ ಚೀನಾವರೆಗೆ ಕಂಡುಬರುವ ದಕ್ಷಿಣ ಪೂರ್ವ ಏಷ್ಯನ್ ಕಾಡುಕೋಣ.

**ವಾಸಸ್ಥಾನ ಮತ್ತು ಸ್ಥಿತಿ**

ಕಾಡುಕೋಣಗಳು ಸದಾ ಹಸಿರು ಹಾಗೂ ಎಲೆ ಬೀಳುವ ಕಾಡುಗಳಲ್ಲಿ (ಸುಮಾರು 6000 ಅಡಿ ಎತ್ತರದವರೆಗೆ) ವಾಸಿಸುತ್ತವೆ.

ಕಳೆದ ಕೆಲವು ದಶಕಗಳಲ್ಲಿ ವಾಸಸ್ಥಾನ ನಾಶ ಮತ್ತು ಅಕ್ರಮ ಬೇಟೆ (Poaching) ಕಾರಣವಾಗಿ ಇವುಗಳ ಸಂಖ್ಯೆ ಸುಮಾರು 70% ರಷ್ಟು ಕುಸಿತವಾಗಿದೆ.ಆದ್ದರಿಂದ ಕಾಡುಕೋಣಗಳನ್ನು ಅಪಾಯದ ಅಂಚಿನಲ್ಲಿರುವ (Vulnerable) ಜಾತಿಗಳಾಗಿ ಪಟ್ಟಿ ಮಾಡಲಾಗಿದೆ.



ಚಿತ್ರ ಕೃಪೆ: ವಿಶಾಲ್ ಕುಂಬಾರ್

**ದೇಹದ ಲಕ್ಷಣಗಳು:** ಗಂಡು ಕಾಡುಕೋಣದ ತೂಕ: 635–1000 ಕೆ.ಜಿ

ಉದ್ದ: 8–11 ಅಡಿ (2.44–3.35 ಮೀ)

ಭುಜದ ಎತ್ತರ: 5–7 ಅಡಿ (1.5–2.1 ಮೀ)

ಹೆಣ್ಣು ಕಾಡುಕೋಣಗಳು ಗಂಡುಗಳ ಗಾತ್ರದ ಸುಮಾರು ¼ ಭಾಗದಷ್ಟು ಮಾತ್ರ ಇರುತ್ತವೆ.

ದೇಹದ ಬಣ್ಣ ಕೆಂಪು-ಕಂದುದಿಂದ ಗಾಢ ಕಂದು. ಹೆಣ್ಣು ಮತ್ತು ಕಿರಿಯ ಕಾಡುಕೋಣಗಳು ತುಸು ತಿಳಿ ಬಣ್ಣದಲ್ಲಿರುತ್ತವೆ. ಗಂಡು ಮತ್ತು ಹೆಣ್ಣು ಎರಡಕ್ಕೂ ಮೇಲಕ್ಕೆ ವಕ್ರವಾಗಿರುವ ಕೊಂಬುಗಳು ಇರುತ್ತವೆ. ಕೊಂಬುಗಳು 45 ಇಂಚುಗಳವರೆಗೆ (114 ಸೆಂ.ಮೀ) ಬೆಳೆಯುತ್ತವೆ. ಕೊಂಬುಗಳ ತುದಿಗಳು ಕಪ್ಪಾಗಿರುತ್ತವೆ; ನೆತ್ತಿಯ ಮೇಲೆ ಆಳವಾದ ಕುಳಿ ಮತ್ತು ಕೊಂಬುಗಳ ನಡುವೆ ಉಬ್ಬಿದ ರೇಖೆ ಇರುತ್ತದೆ. ದೊಡ್ಡ ಕಿವಿಗಳು ಮತ್ತೊಂದು ಪ್ರಮುಖ ಲಕ್ಷಣ.

**ಕಾಡುಕೋಣದ ಪ್ರಮುಖ ವಿಶೇಷತೆಗಳು ಇಲ್ಲಿವೆ:**

- ಬಿಳಿ ಸಾಕ್ಸ್‌ನಂತೆ ಕಾಣುವ ಕಾಲುಗಳು: ಮೊಣಕಾಲಿನ ಕೆಳಭಾಗ ಬಿಳಿ/ತಿಳಿ ಹಳದಿ ಬಣ್ಣದಲ್ಲಿರುತ್ತದೆ.

- ಬೆವರಿನ ಗ್ರಂಥಿಗಳು ಕಡಿಮೆ: ಶಾಖ ತಡೆಯಲು ನೀರಿನ ಪ್ರದೇಶಗಳು ಮತ್ತು ತಂಪಾದ ಕಾಡುಗಳನ್ನು ಆಶ್ರಯಿಸುತ್ತವೆ.

- ಬೆನ್ನಿನ ಮೇಲಿನ ಸ್ನಾಯು ಉಬ್ಬು (Muscular Ridge): ಭುಜದಿಂದ ಬೆನ್ನಿನ ಮಧ್ಯವರೆಗೆ ಎತ್ತರವಾದ ಉಬ್ಬು – ಅಪಾರ ಶಕ್ತಿಯ ಸಂಕೇತ.

- ಉಪ್ಪಿನ ಮೇಲಿನ ಪ್ರೀತಿ (Salt Licks): ಖನಿಜಾಂಶಕ್ಕಾಗಿ ಉಪ್ಪು ಇರುವ ಮಣ್ಣನ್ನು ನೆಕ್ಕುತ್ತವೆ.

**ಪರಿಸರದಲ್ಲಿನ ಪಾತ್ರ:**

- ಕಾಡಿನ ಎಂಜಿನಿಯರ್‌ಗಳು – ಓಡಾಡುವಾಗ ನೆಲಕ್ಕೆ ಬೆಳಕು ಬೀಳಲು ಸಹಾಯ.
- ಬೀಜ ಪ್ರಸರಣ – ಹಣ್ಣು ತಿಂದ ನಂತರ ಮಲದ ಮೂಲಕ ಬೀಜ ಹರಡುವುದು.

**ಆಹಾರ ಮತ್ತು ದಿನಚರಿ**

- ಶಾಕಾಹಾರಿಗಳು (ಸಸ್ಯಾಹಾರಿಗಳು): ಹುಲ್ಲು, ಎಲೆಗಳು, ಮೊಗ್ಗುಗಳು, ಹಣ್ಣುಗಳು.
- ದಿನಚರ ಪ್ರಾಣಿಗಳು: ಬೆಳಿಗ್ಗೆ ಮತ್ತು ಸಂಜೆ ಹೆಚ್ಚು ಚಟುವಟಿಕೆ.
- ಮಾನವ ವಾಸಸ್ಥಳದ ಹತ್ತಿರ ಕೆಲವೊಮ್ಮೆ ರಾತ್ರಿ ಸಕ್ರಿಯ (ನಿಶಾಚರ).

**ಶತ್ರುಗಳು ಮತ್ತು ಸ್ವಭಾವ:**

ದೊಡ್ಡ ಗಾತ್ರದ ಕಾರಣ ಹೆಚ್ಚು ಶತ್ರುಗಳಿಲ್ಲ. ಮನುಷ್ಯರನ್ನು ಹೊರತುಪಡಿಸಿ ಹುಲಿ ಮತ್ತು ಮೊಸಳೆಗಳು ಪ್ರಮುಖ ಶತ್ರುಗಳು. ಕೋಪಿಷ್ಠ ಸ್ವಭಾವಕ್ಕೆ ಪ್ರಸಿದ್ಧ; ಕೆಲವೊಮ್ಮೆ ಪ್ರಚೋದನೆ ಇಲ್ಲದೆ ದಾಳಿ ಮಾಡುವ ಸಾಧ್ಯತೆ.

**ಸಾಮಾಜಿಕ ಜೀವನ ಮತ್ತು ವಲಸೆ:**

- ಸಾಮಾನ್ಯವಾಗಿ 8–11 ಸದಸ್ಯರ ಹಿಂಡು (ಕೆಲವೊಮ್ಮೆ 40ರವರೆಗೂ).
- ಮಾತೃಸತ್ತಾತ್ಮಕ ಸಮಾಜ – ಗುಂಪಿನಲ್ಲಿ ಹೆಣ್ಣು ನಾಯಕಿ.
- ಬೇಸಿಗೆಯಲ್ಲಿ ಕಡಿಮೆ ಎತ್ತರದ ಪ್ರದೇಶಗಳಲ್ಲಿ ಸಣ್ಣ ಗುಂಪುಗಳು.
- ಮಳೆಯ ಕಾಲದಲ್ಲಿ ದೊಡ್ಡ ಗುಂಪುಗಳಾಗಿ ಬೆಟ್ಟ ಪ್ರದೇಶಗಳಿಗೆ ಚಲನೆ.
- ಒಂದು ಗುಂಪಿಗೆ ಸುಮಾರು 30 ಚದರ ಮೈಲಿ (78 ಚ.ಕಿ.ಮೀ) ಪ್ರದೇಶ ಅಗತ್ಯ.
- ಸಂವಹನಕ್ಕೆ ವಿಭಿನ್ನ ಧ್ವನಿಗಳು; ಅಪಾಯಕ್ಕೆ ಉಚ್ಚ ಘರ್ಜನೆ.

**ಸಂಭೋಗ ಮತ್ತು ಆಯುಷ್ಯ**

ಸಂಭೋಗ ಕಾಲ: ಸಾಮಾನ್ಯವಾಗಿ ಡಿಸೆಂಬರ್ ನಿಂದ ಜೂನ್‌ವರೆಗೆ; ಪ್ರಾಬಲ್ಯ ಗಂಡುಗಳಿಗೆ ಸಂಭೋಗದ ಅವಕಾಶ.



ಚಿತ್ರ ಕೃಪೆ: ವಿಶಾಲ್ ಕುಂಬಾರ್

**ಗರ್ಭಾವಧಿ:**
ಸುಮಾರು 275 ದಿನಗಳು (9 ತಿಂಗಳು), ಸಾಮಾನ್ಯವಾಗಿ ಒಂದೇ ಕರು ಜನನ.

**ಆಯುಷ್ಯ:** ಸುಮಾರು 30 ವರ್ಷಗಳು

ಪ್ರಸ್ತುತ ಜಗತ್ತಿನಲ್ಲಿ ಸುಮಾರು 13,000 ರಿಂದ 30,000 ಕಾಡುಕೋಣಗಳು ಮಾತ್ರ ಇವೆ. ಅವುಗಳಲ್ಲಿ ಸುಮಾರು 85 ಶೇಕಡಾ ಸಂಖ್ಯೆಯ ಕಾಡುಕೋಣಗಳು ಭಾರತದಲ್ಲೇ ವಾಸಿಸುತ್ತಿವೆ.




ಚಿತ್ರ ಕೃಪೆ: ವಿಶಾಲ್ ಕುಂಬಾರ್

**ಶ್ರೀ ನವೀನ ಪ್ಯಾಟಿಮನಿ**
**ಟ್ಯಾಕ್ಸಿಡರ್ಮಿಸ್ಟ**
**ಪ್ರಾದೇಶಿಕ ಪ್ರಾಕೃತಿಕ ನೈಸರ್ಗಿಕ ಇತಿಹಾಸ ವಸ್ತುಸಂಗ್ರಹಾಲಯ, ಮೈಸೂರು.**
**ಇಮೇಲ್:-naveenpyatimani9901@gmail.com**



# ವನ್ಯ ಕ್ಯಾಲೆಂಡರ್





**ಮಾರ್ಚ್ 3 , 2026**

**ವಿಶ್ವ ವನ್ಯಜೀವಿ ದಿನ**

world wildlife day



**ಮಾರ್ಚ್ 14 , 2026**

**ರಾಷ್ಟ್ರೀಯ ಚಿಟ್ಟೆ ದಿನ**

National butterfy day



**ಮಾರ್ಚ್ 20, 2026**

**ವಿಶ್ವ ಗುಬ್ಬಚ್ಚಿ ದಿನ**

World Sparrow Day



**ಮಾರ್ಚ್ 20, 2026**

**ವಿಶ್ವ ಕಪ್ಪೆ ದಿನ**

World Frog Day



**ಮಾರ್ಚ್ 21 , 2026**

**ವಿಶ್ವ ಅರಣ್ಯ ದಿನ**

International Day of Forests



**ಮಾರ್ಚ್ 22 , 2026**

**ವಿಶ್ವ ಜಲ ದಿನ**

world waterday

# ವನ್ಯ

ಹಸಿರು ಲೋಕದ ಕೌತುಕ

# ನೀವು ವನ್ಯಕ್ಕೆ ಬರಿಯಬಹುದು

**"ವನ್ಯ"**

ಅಘನಾಶಿನಿ ನೇಚರ್ ಫೌಂಡೇಶನ್ ಪ್ರಸ್ತುತಪಡಿಸುವ ಪ್ರಕೃತಿ, ಅರಣ್ಯ, ವನ್ಯಜೀವಿ ಮತ್ತು ಜೀವ ವೈವಿಧ್ಯತೆಗೆ ಸಂಬಂಧಪಟ್ಟ ಕನ್ನಡದ ಆನ್ಲೈನ್ ಮಾಸ ಪತ್ರಿಕೆ.

ನಿಮ್ಮ ಅನುಭವ, ಲೇಖನ, ಕಥನ, ಸಂಶೋಧನಾ ಟಿಪ್ಪಣಿ ಅಥವಾ ಪ್ರಕೃತಿ ದಿನಚರಿಗೆ ಇಲ್ಲಿ ಸದಾ ಸ್ವಾಗತ.

ಪ್ರಕೃತಿಯ ಬಗ್ಗೆ ನಿಮ್ಮ ಪ್ರೀತಿ ಮತ್ತು ಜ್ಞಾನವನ್ನು ಇನ್ನಷ್ಟು ಜನರೊಂದಿಗೆ ಹಂಚಿಕೊಳ್ಳಲು ಇದು ಒಂದು ವೇದಿಕೆ.

- ಲೇಖನವು **ಕನ್ನಡದಲ್ಲಿ** ಇರಬೇಕು.
- ಗರಿಷ್ಠ 2-3 ಪುಟಗಳಿಗೆ ಮೀರದಂತೆ ಲೇಖನವನ್ನು ಬರೆಯಿರಿ.
- ಲೇಖನವನ್ನು **PDF** ಅಥವಾ **Word** ಸ್ವರೂಪದಲ್ಲಿ ಕಳುಹಿಸಿರಿ.
- ಕಳುಹಿಸಬೇಕಾದ ವಿಳಾಸ: **aghanaashini24@gmail.com**

ಈ ಮಾಸಪತ್ರಿಕೆಯಲ್ಲಿ ಪ್ರಕಟವಾಗುವ ಪ್ರತಿಯೊಂದು ಲೇಖನ, ಅಭಿಪ್ರಾಯ ಮತ್ತು ಮಾಹಿತಿಯ ಸಂಪೂರ್ಣ ಜವಾಬ್ದಾರಿ ಸಂಬಂಧಿತ ಲೇಖಕರದ್ದೇ ಆಗಿರುತ್ತದೆ. "ವನ್ಯ" ಸಂಪಾದಕ ಮಂಡಳಿ ಹಾಗೂ ಅಘನಾಶಿನಿ ನೇಚರ್ ಫೌಂಡೇಶನ್ ಲೇಖನಗಳ ವಿಷಯ, ಆಲೋಚನೆಗಳು ಅಥವಾ ಅಭಿಪ್ರಾಯಗಳಿಗೆ ಯಾವುದೇ ರೀತಿಯ ಹೊಣೆಗಾರರಾಗಿರುವುದಿಲ್ಲ.

ನಿಮ್ಮ ಲೇಖನಗಳನ್ನು ನಿರೀಕ್ಷಿಸುತ್ತೇವೆ.

ಅಘನಾಶಿನಿ ನೇಚರ್ ಫೌಂಡೇಶನ್
ಜ್ಞಾನದ ಹರಿವು


ಚಿತ್ರ ಕೃಪೆ: :- ಪ್ರದೀಪ್ ಜೆಟ್ಟಿ